MADAM SPEAKER: Now I will put the next motion to the vote of the House. The question is :

"That the Mysore Apartment Ownership Bill, 1972 be taken into consideration."

The motion was adopted

Madam SPEAKER : I will clauses 2 to 27 now put the Clauses vote of the House. The question is:

"That Clauses 2 to 27 (both inclusive) do stand part of the Bill "

The motion was adopted

Clauses 2 to 27 (both inclusive) were added to the Bill.

Madam SPEAKER : The question is :

"That Clause 1, the long Title, the preamble and the Enacting Formula do stand part of the Bill."

The motion was adopted

Clause 1, the long title, the Preamble and the Enacting Formula were added to the Bill.

Motion to Pass

SRI B. BASAVALINGAPPA : I move :

That the Mysore Apartment Ownership Bill, 1972 be passed."

Madam SPEAKER : The question is :

" That the Mysore Apartment Ownership Bill, 1972 be passed."

The motion was adopted and the Bill was passed

MADAM SPEAKER : The Hon. Minister for Municipal Administration to move the next Bill.

MYSORE ACQUISITION OF LANDS (FOR GRANT OF HOUSE SITES) BILL 1972—MOTION TO CONSIDER

SRI B BASAVALINGAPPA.—(Minister for Municipal Administration) : I beg to move :

"That the Mysore Acquistion of Lands (for Grant of House Sites) Bill 1972 be taken into consideration."

Madam SPEAKER: Motion moved:

"That the Mysore Acquisition of lands (for Grant of House Sites) Bill, 1972 be taken into consideration."

† SRI B. BASAVALINGAPPA: Madam Speaker, this is very simple Bill. The Government of India decided that the people living in rural areas should be given house sites and persons who have no sites in rural areas should be provided with sites. So for, out of the available Government land have distributed m re than 2 lakh sites. But that is not sufficient. e have more number of people living in rural who have no house sites for constructing houses for their dwelling purposes. Now we live in an are where people who had no property and who could not own house are living on the land of others. With a view to provide a little bit of property to all those persons in rural areas this Bill has been brought forward by Government to acquire land for grant of house sites to these people. This is a non-controversial Bill and I hope the House will agree with the Bill.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ ಕ್ಷೇತ್ರ)

4-30 P.M.

ಸನ್ಮಾನ್ಯ ಅಧ್ಯಕ್ಷಣಿಯವರೆ. ಮಾನ್ಯ ಸಚಿವರು ಮೈಸೂರು ಆಕ್ವಿಸಿಷನ್ ಆಫ್ ಲ್ಯಾಂಡ್ಸ್ ಫಾರ್ ಗ್ರಾಂಟ್ ಆಫ್ ಹೌಸ್ ಸೈಟ್ಸ್ ಬಿಲ್ಲನ್ನು ಇಟ್ಟಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಇದರಲ್ಲಿ ಗ್ರಾಮಾಂತರ ಪ್ರದೇಶದ ಹರಿಜನ-ಗಿರಿಜನರಿಗೆ ಮನೆ ಕಟ್ಟಿಕೊಳ್ಳುವ ನಿವೇಶನಗಳನ್ನು ಹಂಚುವ ಏನು ಯೋಜನೆ ಇದೆ, ಆ ಯೋಜನೆ ಸ್ವಾಗತಾರ್ಹ. ಆದರೂ ಕೂಡ ಕಾರ್ಯತಃ ಇದರಲ್ಲಿ ಅನೇಕ ಲೋಪದೋಷಗಳನ್ನು ನಾವು ಕಂಡಿದ್ದೇವೆ ಕಾರಣ ಇವತ್ತು, ಹಳ್ಳಿಗಳಲ್ಲಿ ಸೈಟು ಹಂಚುವುದು, ನಿವೇಶನಗಳನ್ನು ಹೆಂಚುವುದು ಒಂದು ದೊಡ್ಡ ಕಾರ್ಯಕ್ರಮವಾಗಿದೆ ಆದರೆ ಇವತ್ತಿನ ದಿವಸ ನಿಜವಾಗಿ ಯಾರು ವಸತಿ ಹೀನರು, ನಿವ್ಮ ವರ್ಗದವರು ಇದ್ದಾರೋ ಅವರಿಗೆ ನಿವೇಶನ ಕೊಡಬೇಕು ಎಂದು ಇದ್ದರೂ ಕೂಡ ಕೆಲವು ಕಡೆಗಳಲ್ಲಿ ಅದರ ವಿರುದ್ಧವಾಗಿ ವಿತರಣೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಇದರ ಬಗ್ಗೆ ಪ್ರತಿಯೊಂದು ನಿವೇಶನಕ್ಕೂ ಕೂಡ ೧೫೦ ರೂಪಾಯಿಗಳನ್ನು ನಿವೇಶನದ ವ್ಯವಸ್ಥೆಗೆ ಕೊಡುತ್ತೀರೀ ಎಂದು ಕೇಳಿದ್ದೇನೆ. ಆದರೆ ಇವತ್ತಿನ ದಿವಸ ಹಳ್ಳಿಗಳ ಪರಿಸ್ಥಿತಿಯನ್ನು ನೋಡಿದರೆ, ಬಡವರು ಯಾರಿದ್ದಾರೆ. ಅವರಿಗೆ ಸರ್ಕಾರದ ಸೈಟನ್ನು ಕೊಟ್ಟನಂತರ ಈ 150-200 ರೂಪಾಯಿಗಳನ್ನು ಅವರ ಕೈಗೆ ಕೊಟ್ಟರೆ ಅವರು ಒಂದು ಸಣ್ಣ ಗುಡಿಸಲನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿದೆ. ಆದರೆ ನಿಮ್ಮ ಸರ್ಕಾರದ ಅಧಿಕಾರಿ ವರ್ಗದವರು ಒಂದು ಸೈಟಿಗೆ ೧೫೦ ರೂಪಾಯಿಯನ್ನು ಕೊಡುವ ಮಾತನ್ನು ಎಲ್ಲೂ ಹೇಳಲಿಲ್ಲ, ಹೇಳುವುದಿಲ್ಲ ನನಗೂ ಕೂಡ ಮೊನ್ನೆ ಮೊನ್ನೆ ನನ್ನ ಕ್ಷೇತ್ರದಲ್ಲಿ ಈ ವಿಷಯ ತಿಳಿಯಿತು. ಹಳ್ಳಿಯ ಜನ ಮುಗ್ಧರು, ಅವರಿಗೆ ಏನು ಗೊತ್ತಾಗುವುದಿಲ್ಲ. ಒಂದು ಸೈಟು ಕೊಟ್ಟರೆ ಸಂತೋಷದಿಂದ ಇರುತ್ತಾರೆ. ಆದರೆ ಲೆಕ್ಕದಲ್ಲಿ ಮಾತ್ರ ಈ ೧೫೦ ರೂಪಾಯಿಗಳೂ ಖರ್ಚಾಗಿರುತ್ತದೆ. ಈ ದುಡ್ಡನ್ನು ನಿಮ್ಮ ಅಧಿಕಾರ ವರ್ಗದವರು ಯಾರು ಇರುತ್ತಾರೋ ಅವರಿಗೆ ಹಂಚಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವಿರುತ್ತದೆ. ಮತ್ತು ಹಳ್ಳಿಯ ಮುಂಖಂಡರೂ ಇದಕ್ಕೆ ಶಾಮಿಲು ಆಗಿರತಕ್ಕ ಸಂದರ್ಭಗಳು ಇಲ್ಲದಿಲ್ಲ. ಈ ಸೈಟುಗಳನ್ನು ರಿಪೇರಿ ಮಾಡಿಕೊಂಡು ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ೧೫೦ ರೂಪಾಯಿ ಈ ನಿರ್ಗತಿಕರಿಗೆ ಕೊಡುತ್ತಾರೆ. ಈ ಹಣ ಅವರ ಕೈಗೆ ಸಿಕ್ಕುವ ಹಾಗೆ ಮಾಡಿದರೆ ಒಳ್ಳೆಯದು ಸರ್ಕಾರಕ್ಕೆ ಸಂಬಂಧಪಟ್ಟ ಭೂಮಿಯಲ್ಲಿ ನಿವೇಶನಗಳನ್ನು ಹುಚಿ ಖಾಸಗೀಯವರ ಜಮೀನನ್ನು ನಿವೇಶನಗಳನ್ನು ಹಂಚುವುದಕ್ಕೆ ಆಕ್ವಿಯರ್ ಮಾಡಿಕೊಳ್ಳುವುದಾದರೆ, ಸಂಬಂಧಪಟ್ಟ ಮಾಲೀಕರಿಗೆ ಪರಿಹಾರವನ್ನು ಕೊಡತಕ್ಕ ಕೆಲಸ ಇದೆ. ಇದನ್ನು ನಾವು ಬಹಳ ಮುಖ್ಯವಾಗಿ ಗಮನಿಸಬೇಕಾಗಿದೆ ಖಾಸಗೀಯವರಿಗೆ ಕಾಂಪನ್ಸೇಷನ್ ಕೊಡುವುದು ದೊಡ್ಡ ಕೆಲಸವಾಗಿದೆ. ಹಿಂದೆ ಶರಾವತಿ ಯೋಜನೆಯಲ್ಲಿ ಮುಳುಗಡೆ ಆದ ಜಮೀನಿಗೆ ಕಾಂಪನ್ಸೇಷನ್ ಎಂತೆಂಥವರಿಗೆ ಸಿಕ್ಕಿತು. ಹೇಗೆ ಹೇಗೆ ಕಾಂಪನ್ಸೇಷನ್ ಪಡೆದರು. ಅವರ ಜಮೀನು ಮುಳುಗಡೆಯಾಗದಿದ್ದರೂ, ತೋಟ ಇಲ್ಲದಿದ್ದರೂ,

ಬೇರೆಯವರ ಅಡಿಕೆ ತೋಟದ ಫೋಟೊವನ್ನು ಅಧಿಕಾರಿಗಳಿಗೆ ತೋರಿಸಿ, ಅವರನ್ನು ಸರಿಮಾಡಿಕೊಂಡು ಲಕ್ಷಾಂತರ ರೂಪಾಯಿ ಕಾಂಪನ್ಸೇಷನ್ ಪಡೆದಿರತಕ್ಕ ಅನೇಕ ಉದಾಹರಣೆಗಳು ನಮಗೆ ಚೆನ್ನಾಗಿ ಗೊತ್ತಿದೆ ಇಲ್ಲಿ ಖಾಸಗೀ ಒಡೆಯರಿಗೆ ಎಷ್ಟು ಕಾಂಪನ್ಸೇಷನ್ ಕೊಡುವುದು ಎನ್ನುವುದಕ್ಕೆ, ನಿಮ್ಮ ಖಾಸಗಿ. ಮಾಲೀಕರ ಒಪ್ಪಂದದ ಮೇಲೆ ಇದೂ ಇತ್ಯರ್ಥವಾದರೆ ಒಳ್ಳೆಯದು. ಅದು ಆಗದಿದ್ದರೆ, ಕೋರ್ಟಿಗೆ ಈ ವಿಷಯವನ್ನು ರೆಫರ್ ಮಾಡುವ ಅವಕಾಶ ಇದೆ. ಖಂಡಿತವಾಗಿಯೂ ಯಾವುದೇ ಕೆಲಸ ಕೂಡ ಖಾಸಗಿ ಮತ್ತು ಸರ್ಕಾರದ ಒಪ್ಪಂದದ ಮೇಲೆ ತೀರ್ಮಾನವಾಗುವುದಿಲ್ಲ ಎಂದು ನಮಗೆ ಸಂಪೂರ್ಣವಾಗಿ ಗೊತ್ತಿದೆ. ಕೋರ್ಟಿಗೆ ಹೋದರೆ, ಹೆಚ್ಚು ಕಾಂಪನ್ಸೇಷನ್ ಸಿಕ್ಕುತ್ತದೆ ಎನ್ನುವ ವಿಶಾಸ ಪ್ರತಿಯೊಬ್ಬರಿಗೂ ಇದೆ. ಖಾಸಗೀಯವರಿಗೆ ಹೆಚ್ಚು ಹಣ ಸಿಕ್ಕಲಿ, ನಮ್ಮದು ಏನೂ ಅಭ್ಯಂತರವಿಲ್ಲ. ಕೋರ್ಟಿಗೆ ಬಂದನಂತರ ಅದಕ್ಕೆ ತೆಗೆದುಕೊಳ್ಳತಕ್ಕ ಸಮಯಂ ಎಷ್ಟು ಆಗುತ್ತದೆ ಎನ್ನುವುದನ್ನು ಯೋಚನೆ ಮಾಡಿದರೆ ಎಷ್ಟು ಕಾಲದವರಿಗಾದರೂ ಇವರಿಗೆ ಸೈಟು ಸಿಕ್ಕುವುದಿಲ್ಲ, ಸುಮ್ಮನೆ ಕಾಲಹರಣವಾಗುತ್ತದೆ. ಕೋರ್ಟ್‌ಬಗ್ಗೆ ಹೇಳಬೇಕಾದರೆ, ನಾನು ಯಾರ ಮೇಲೂ ಆರೋಪ ಮಾಡುವುದಿಲ್ಲ. ಅಲ್ಲಿ ಆಗತಕ್ಕ ವಿಳಂಬ ನೀತಿ ಏನು ಇದೆ ಅದನ್ನು ಉದ್ದೇಶಪೂರ್ವಕವಾಗಿ ಮಾಡುತ್ತಾರೆ. ೧೦ ಜನದ ಅಕ್ವಿಜಿಷನ್ ಪ್ರೊಸಿಜೆಡಿಂಗ್ ಅಪೀಲು ಬಂದಿದ್ದರೆ, ೧೨ ಜನರಲ್ಲಿ ಯಾರು ನ್ಯಾಯಾಧೀಶರ ಜಾತಿಯವರು ಇಲ್ಲ ಎಂದರೆ, ಆ ೧೦ ಜನದ ಅಪೀಲು ಹಾಗೆ ನಿಂತಿರುತ್ತದೆ.

ತಮ್ಮ ಜಾತಿಯವರು ಬಂದಾಗ ತಕ್ಷಣ ತೀರ್ಮಾನಮಾಡಿ ಜಡ್ಜ್‌ಮೆಂಟ ಕೊಡುವುದುಂಟು. ಇಂಥಾದ್ದು ನಡೆಯಬಹುದು. ಅನೇಕ ರೀತಿಯಲ್ಲಿ ವಿಳಂಬ ನೀತಿ ಅನುಸರಿಸುವುದು ಮತ್ತು ನ್ಯಾಯಾಲಯಗಳಲ್ಲಿ ನಿಧಾನವಾಗಿ ತೀರ್ಮಾನಮಾಡುವುದು ಈ ಪ್ರವೃತ್ತಿ ಇದ್ದರೆ ಇದನ್ನು ತಡೆಗಟ್ಟಲು ಒಂದು ಪರಿಹಾರ ಕಂಡುಹಿಡಿಯಬೇಕಾದ ಅವಶ್ಯಕತೆ ಇದೆ. ಉದಾಹರಣೆ ಹೇಳುವುದಾದರೆ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಇಂಥ ಲೋಪದೋಷವಿದೆ, ಮೂರು ಗುಂಪುಗಳಿವೆ ಎಂದು ಹೇಳುವರು. ಈ ತಿಕ್ಕಾಟದಲ್ಲಿ ಜನರ ಶೋಷಣೆಯಾಗುತ್ತಿದೆ. ರಾಜಕೀಯ ಕ್ಷೇತ್ರದಲ್ಲಿ ಮತ್ತಿತರ ಕ್ಷೇತ್ರಗಳಲ್ಲೆ ಜಾತೀಯತೆ ತಾಂಡವಾಡುತ್ತಿದೆ. ಇದಕ್ಕೆ ಅವಕಾಶವಿರಬಾರದು. ಎಲ್ಲರಿಗೂ ನ್ಯಾಯ ಸರಿಯಾಗಿ ದೊರೆಯಬೇಕು, ಯಾವುದೇ ಕಾರಣಕ್ಕಾದರೂ ಅನ್ಯಾಯವಾಗಬಾರದು, ಯಾರಿಗೂ ತೊಂದರೆಯಾಗಬಾರದು, ಪ್ರಾಮಾಣಿಕತೆ ಮತ್ತು ನ್ಯಾಯಕ್ಕೆ ಪ್ರಾಶಸ್ತ್ಯವಿರಬೇಕು ಮತ್ತು ಮುಖ್ಯವಾಗಿ ಶೀಘ್ರವಾಗಿ, ನಿಷ್ಪಕ್ಷಪಾತವಾಗಿ ತೀರ್ಮಾನವಾಗಬೇಕಾದ ಅಗತ್ಯವಿದೆ. ನ್ಯಾಯಾಧಿಪತಿಗಳಲ್ಲಿ ವಿಶಾಲ ಮನೋಭಾವವಿರಬೇಕು, ಆದಷ್ಟು ಶೀಘ್ರವಾಗಿ ಕೆಲವು ವಾರಗಳಲ್ಲಿ ಅಥವ ಮೂರು ತಿಂಗಳಲ್ಲಿ ಆದರೂ ತೀರ್ಮಾನವಾಗಬೇಕು. ಇಲ್ಲದಿದ್ದರೆ ಸರಿಯಾದ ಪರಿಹಾರ ಜನತೆಗೆ ದೊರೆಯುವುದಿಲ್ಲ ಈ ಬಗ್ಗೆ ಯೋಚಿಸಿ ಹೆಚ್ಚು ಸಿಬ್ಬಂದಿಯನ್ನಾದರೂ ನೇಮಿಸಿ ಅಥವ ಬೇರೆ ಪರಿಹಾರವನ್ನಾದರೂ ಕಂಡುಹಿಡಿದು ಇಂದು ನ್ಯಾಯಾಲಯಗಳಲ್ಲಾಗುವ ಅನ್ಯಾಯ ತಡೆಗಟ್ಟಬೇಕಾದ ಅವಶ್ಯಕತೆ ಇದೆ. ಈಗ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿಲ್ಲ. ಇಂಥ ಮನೋಭಾವದಿಂದ ಕೆಲಸ ನಡೆಯುತ್ತಿರಬಹುದು ಎಂಬ ವದಂತಿ ಇದೆ. ಇದು ಹಿತಕರವಲ್ಲ.

ಶ್ರೀ ಬಿ. ಬಸವಲಿಂಗಪ್ಪ:- ಸೀನೆ ಭೂಮಿಯ ಒಡೆಯನ್ನು ನೋಡಿ—ಸ್ಟೇ ಕೊಡುವುದಿಲ್ಲ, ಅವರು ಏನಾದರೂ ಮಾಡಿಕೊಳ್ಳಲಿ, ಸ್ವಾಧೀನಪಡಿಸಿಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಒಳ್ಳೆಯದು. ಪರಿಹಾರ ಕೊಡುವಾಗ ಕೂಡ ಸ್ವಲ್ಪ ವಿಚಾರಮಾಡಬೇಕು. ಏಕೆಂದರೆ ಡಿಸಕ್ರೀಪನರಿ ಎಂದಿದೆ. ತಮಗೆ ಬೇಕಾದವರನ್ನು ಲಕ್ಷಾಧೀಶ್ವರರನ್ನು ಮಾಡಬಹುದು, ಹಿಂದೆ ಹಾಗಾಗಿದೆ. ಮುಂದೆ ಇಂಥದ್ದಾಗಬಾರದು. ಯಾರ ವಿಚಾರದಲ್ಲೇ ಆಗಲಿ ಅನುಚಿತವಾಗಿ ವರ್ತಿಸಬಾರದು ಪರಿಹಾರ ಕೊಡುವುದನು ಶೀಘ್ರವಾಗಿ ಪಾವತಿಮಾಡಬೇಕು. ಆದರ ಮೇಲೆ ಅನೇಕರು ಅವಲಂಬಿಸಿರುವರು.

ಇನ್ನು ಹಳ್ಳಿಗಳಲ್ಲಿ ಇವತ್ತು ಖಾಸಗಿಯವರ ಭೂಮಿಯನ್ನು ಆಕ್ವೈರ ಮಾಡುತ್ತೀರಿ. ಹಾಗೆ ಮಾಡುವಾಗ ವಿವೇಚನೆ ಉಪಯೋಗಿಸಬೇಕು. ಬಡವರು ಜಮೀನನ್ನು ಗೇಣಿದಾರರು ಮುಂತಾದವರು ಯಾರಿದ್ದಾರೆ ಅವರ ಜಮೀನನ್ನು ಸ್ವಾಧೀನ ಪಡಿಸಿಕೊಳುವುದನ್ನು ಅದಷ್ಟು ಬಿಡಬೇಕು. ಅದು ಊರ ಪಕ್ಕದಲ್ಲಿದ್ದರೆ ಆಗಬಹುದು. ಊರ ಪಕ್ಕದಲ್ಲಿ ದೊಡ್ಡ ಮನುಷ್ಯರ ಜಮೀನಿದ್ದರೆ ಪ್ರಭಾವಕ್ಕೊಳ್ಳಗಾಗಿ ಅವರ ಜಮೀನು ಮುಟ್ಟದೆ ಸಾಮಾನ್ಯ ಜನರ ಜಮೀನನ್ನು ಆಕ್ವೈರ್ ಮಾಡುವುದುಂಟು. ಕಾರಣ ಶ್ರೀಮಂತರು, ಬಂಡವಾಳಗಾರರು ಮುಂತಾದವರ ಪ್ರಭಾವಕ್ಕೊಳಗಾಗುವುದುಂಟು. ಯಾವುದು ಊರಿಗೆ ಲಗತ್ತಾಗಿದೆ, ಮತ್ತು ವಾಸಕ್ಕೆ ಯೋಗ್ಯವಾಗಿದೆ ಅದು ಯಾರದೇ ಆಗಿರಲಿ ಸ್ವಾಧೀನ ಪಡಿಸಿಕೊಳ್ಳಬಹುದು. ಕೆಲವು ಕಡೆ ಹೊಂಡ, ಗುಡ್ಡ ಇರುವ ಪ್ರದೇಶಗಳನ್ನು ಆಳೆದುಕೊಟ್ಟಿದ್ದಾರೆ. ಹೇಗೂ ಹರಿಜನರಿಗೆ

(ಶ್ರೀ ಕೊಣಂದೂರಂಲಿಂಗಪ್ಪ)

ಕೊಡುವುದು ತಾನೆ, ಎಲ್ಲಾದರೇನು ಎಂದು ಕೆಲವು ಕಡೆ ಇಂಥ ಪ್ರದೇಶಗಳನ್ನು ಕೊಟ್ಟಿದ್ದಾರೆ. ತೀರ್ಥ ಹಳ್ಳಿಯ ಹತ್ತಿರ ೪೫ ಎಕರೆ ನಾವು ಆಕ್ವೈರ್ ಮಾಡಿಕೊಳ್ಳುತ್ತೇವೆ, ಅದು ಸೈಟಿಗೆ ಒಳ್ಳೆಯ ಜಾಗ, ಅದನ್ನು ನಾವು ಆಕ್ರಮಣ ಮಾಡುತ್ತೇವೆ, ತಾವೂ ಬಂದಿರೆ ಸ್ವಾಗತಿಸುತ್ತೇವೆ. ಒಟ್ಟಿನಲ್ಲಿ ಹೊಸನಗರ, ತೀರ್ಥ ಹಳ್ಳಿ ಮುಂತಾದ ಎಲ್ಲಾ ಕಡೆಗಳಲ್ಲೂ ಸೈಟುಗಳನ್ನು ಹಂಚುವಾಗ ಒಳ್ಳೆಯ ಪ್ರದೇಶ ಕೊಡಿ, ಕೊಡುವಾಗ ಕಾಡುಮೇಡು, ರೆವನ್ಯೂ ಲ್ಯಾಂಡು, ಖಾಸಗಿಯವರಿಗೆ ಸೇರಿರುವುದು ಮುಂತಾದ್ದೆಲಾ ಇರುವುದು, ಗ್ರಾಮಗಳಲ್ಲಿ ಖಾಲಿ ನಿವೇಶನ ಇರುವುದು, ಅವನ್ನು ಆಕ್ವೈರ್ ಮಾಡಿ ಹರಿಜನರು—ಗಿರಿಜನರು ಮುಂತಾದವರಿಗೆ ಕೊಡಲು ಅವಕಾಶ ಮಾಡಬೇಕು. ಹಾಗೆ ಮಾಡದೆ ಹೊಸ ಯೋಜನೆ ಮಾಡಿ ಹೊಸ ಕೇರಿ ಮಾಡಿದರೆ ಅಸ್ಪೃಶ್ಯತೆ ನಿವಾರಣೆಯಾಗುವುದಿಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಊರಮಧ್ಯೆ ಸರಕಾರಿ ಭೂಮಿಯಿದ್ದರೆ ಹರಿಜನ—ಗಿರಿಜನರಿಗೆ ಹಂಚಬೇಕು ಎಂದು ಸಲಹೆಮಾಡುತ್ತೇನೆ. ಆ ರೀತಿ ಮಾಡಬೇಕು ಮತ್ತು ಪರಿಹಾರದ ಬಗ್ಗೆ ಕೂಡ ಹೆಚ್ಚುಮಾಡಬೇಕು ಎಂದು ಇಷ್ಟು ಹೇಳಿ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್, ಪಂಲ್ಲೇಶ್ವರಂ—ಸನ್ಮಾನ್ಯ ಸಭಾಧ್ಯಕ್ಷಣಿಯರೇ ಈ ದಿವಸ ಮಾನ್ಯ ಸಚಿವರು ತಂದಿರುವ ಬಿಲ್ಲಿನ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಇದು ಬಹಳ ಚಿಕ್ಕದು, ವಿವಾದಾಸ್ಪದವಾದುದಲ್ಲ. ಆದುದರಿಂದ ಒಪ್ಪಿ ಕೊಡುಬಿಡಬಹುದು ಎಂದು ಬಸವಲಿಂಗಪ್ಪನವರು ಹೇಳಿದರು. ಆದರೆ ಇದು ಅಷ್ಟು ಸುಲಭವಾದುದಲ್ಲ ಎಂಬುದು ನನ್ನ ಅಭಿಪ್ರಾಯ. ಗುರಿ ಒಳ್ಳೆಯದು, ಆದರ ಬಗ್ಗೆ ಎನೂ ಹೇಳುವುದಿಲ್ಲ. ಯಾರಿಗೆ ಜಮೀನಿಲ್ಲ ಅವರಿಗೆ ಕೊಡಬೇಕು, ಭೂಮಿಯಾ ಆಕ್ವೈರ್ ಮಾಡಿಕೊಳ್ಳಬೇಕು. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದು ನ್ಯಾಯವಾದುದು, ಬಿಲ್ ಇದಕ್ಕೆ ತಂದು ಮಾಡಬೇಕು. ಈಗಲಾದರೂ ಈ ಬಗ್ಗೆ ಬಿಲ್ ತಂದರಲ್ಲಾ ಎಂದು ಶಾಭಾಸಗಿರಿ ಕೊಡಬೇಕಾಗಿದೆ. ಇದರ ಸಂಬಂಧದಲ್ಲಿ ಎರಡು ಮೂರು ವಿಷಯಹೇಳಬೇಕಾಗಿದೆ.

ಉದ್ದೇಶವೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನಿಲ್ಲದಿರುವವರಿಗೆ ಸೈಟು ಕೊಡಲು ಆಕ್ವೈರ್ ಮಾಡಿಕೊಳ್ಳಲು ಅಧಿಕಾರ ಬೇಕೆಂಬುದು. ಬಿಲ್ಲನ್ನು ಓದಿದರೆ ಇದು ಎಲ್ಲರಿಗೂ ಅನ್ವಯಿಸುವಂತೆ ಕಾಣುವುದು. ಅಂದರೆ ಈ ಭೂಮಿ ನಗರ ಪ್ರದೇಶದಲ್ಲೇ ಇರಲಿ ಅಥವಾ ಗ್ರಾಮಾಂತರ ಪ್ರದೇಶದಲ್ಲೇ ಇರಲಿ ಅದನ್ನು ಮುಂದೆ ಅಕ್ವಾಯರ್ ಮಾಡತಕ್ಕ ಕಾಲಕ್ಕೆ ತೊಂದರೆ ಬರಬಾರದು ಅನತಕ್ಕ ದೃಷ್ಟಿಯಿಂದ ನಾನಿ ಇದನ್ನು ಹೇಳುತ್ತಿದ್ದೇನೆ. ಆದುದರಿಂದ ನಾನು ಸರ್ಕಾರದವರನ್ನು ಕೇಳುತ್ತಿರುವುದೇನೆಂದರೆ ಇಲ್ಲಿ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್‌ನಲ್ಲಿ ಏನು ಹೇಳಿದ್ದಾರೋ ಅದಕ್ಕೂ ಮತ್ತು ಬಿಲ್ಲಿನ ಬಾಡಿಯಲ್ಲಿ ಹೇಳಿರುವುದಕ್ಕೂ ವ್ಯತ್ಯಾಸವಿದೆ. ಆದುದರಿಂದ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್‌ನಲ್ಲಿ ಈ ಕಾನೂನು ಎಲ್ಲರಿಗೂ ಅನ್ವಯಿಸತಕ್ಕ ರೀತಿಯಲ್ಲಿ ಇದನ್ನು ಬದಲಾವಣೆ ಮಾಡಬೇಕೆಂದು ಸೂಚನೆ ಮಾಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ದಯವಿಟ್ಟು ಕ್ಲಾಜ್ (೩) ನ್ನು ಓದಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಅದನ್ನು ಓದಿಯೇ ಹೇಳುತ್ತಿರುವುದು. ನಾನು ಸಲಹೆ ಮಾಡುತ್ತಿರುವುದು ಇಲ್ಲಿ ತಾವು ಹೇಳಿರತಕ್ಕ ''ರೂರಲ್ ಏರಿಯಾ'' ಎಬ ಪದಗಳನ್ನು ಕೈಬಿಟ್ಟರೆ ಎಲ್ಲವೂ ಸರಿಹೊಗುತ್ತದೆ ಎನ್ನುವುದು ನನ್ನ ವಾದ. ಹಾಗೆ ಮಾಡಿದರೆ ಆಗ ಇದು ಜನರಲ್ ಕಾನೂನು ಆಗುತ್ತದೆ.

ಇನ್ನು ಮಾನ್ಯ ಸಚಿವರಲ್ಲಿ ಪ್ರಾರ್ಥಿಸಬೇಕಾದ ಎರಡನೇ ಬಹಳ ಪ್ರಾಮುಖ್ಯವಾದ ಪ್ರಶ್ನೆ ಏನೆಂದರೆ—ಈ ಅಕ್ವಿಜಿಷನ್ ಆಫ್ ನ್ಯಾ ಡಿನ ವಿಚಾರ. ಆದರೆ ಮಾನ್ಯ ಸಚಿವರು ಭೂಮಿಯನ್ನು ೩೦ ದಿವಸಗಳಲ್ಲೊಳಗಾಗಿ ಆಕ್ವಯರ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಅವರು ಹಾಗೆ ಹೇಳಿದ್ದಕ್ಕೂ ಮತ್ತು ಇಲ್ಲಿ ಮಾಡಿರುವುದಕ್ಕೂ ಬಹಳ ವ್ಯತ್ಯಾಸವಿದೆ. ಇದರಲ್ಲಿ ಹೇಳಿರತಕ್ಕ ಪ್ರಕಾರ ಒಂದು ಜಮೀನನ್ನು ಆಕ್ವಯರ್ ಮಾಡಬೇಕಾಗಿದ್ದಾರೆ ಅದರ ಬಗೆ ರಾಜ್ಯ ಸರ್ಕಾರದವರು ಮೊದಲು ಒಂದು ನೋಟಿಫಿಕೇಷನ್ ಹೊರಡಿಸಬೇಕೆಂದೂ, ಮತ್ತು ಆ ಜಮೀನನ್ನು ಪಡೆಯಂತಕ್ಕ ಉದ್ದೇಶವೇನು ಅನ್ನುವುದನ್ನೂ. ಅನಂತರ ಭೂಮಿಯನ್ನು ಏಕೆ ೩೦ ದಿವಸಗಳ ಒಳಗೇ ಆಕ್ವಯರ್ ಮಾಡಬಾರದು ಅನ್ನುವುದಕ್ಕೆ ಒಂದು ನೋಟೀಸನ್ನೂ ಕೊಡಬೇಕೆಂದು ಹೇಳಲಾಗಿದೆ. ಆನಂತರ ಗೌರ್ನಮೆಂಟ್ ಆ ಕೇಸನ್ನು ಹಿಯರಿಂಗ್ ಮಾಡಿ ಆರ್ಡರ್‌ನ್ನು ಪಾಸ್ ಮಾಡಬೇಕೆಂದು ಹೇಳಲಾಗಿದೆ ನಮ್ಮ ಅನುಭವದಲ್ಲಿ

ಕಂಡ ಹಾಗೆ ಹೇಳುವುದಾದರೆ ಈ ಪ್ರೊವಿಜನ್ ಪ್ರಕಾರ ಹೊರಟರೆ ಇದೂ ಕೂಡ ವರ್ತಾನುಗಟ್ಟಲೆ ಎಳೆಯುತ್ತದೆ. ಶ್ರೀಮಂತರಾದವರು ತಮ್ಮ ಭೂಮಿಯನ್ನು ಅಷ್ಟು ಸುಲಭವಾಗಿ ಆಕ್ವಯರ್ ಮಾಡುವುದಕ್ಕೆ ಅವಕಾಶಕೊಡುವುದಿಲ್ಲ. ಅದನ್ನು ಮುಂದಕ್ಕೆ ತಳ್ಳುತ್ತಾರೆ. ಆದ ಕಾರಣ ಸರ್ಕಾರದವರು ಏನು ಇಲ್ಲಿ ಹೇಳಿದ್ದಾರೆ ಅದನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ ಎಂದು ಇಲ್ಲಿ ಸರ್ಕಾರದವರು ಹೀಗೆ ಹೇಳಿದ್ದಾರೆ.—The Statement of Objects and Reasons applies only to rural areas and not to urban areas. ಅಂದರೆ ಇಲ್ಲಿ ಮುಖ್ಯವಾಗಿ ಹೇಳಿರತಕ್ಕ ಒಂದನೇ ವಿಚಾರ ಎಂದರೆ—ಭೂಮಿಯನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದು ಕೊಳ್ಳುವುದು; ಇನ್ನು ಎರಡನೇ ಮುಖ್ಯವಾದ ವಿಷಯ ಎಂದರೆ—ತೆಗೆದುಕೊಂಡ ಭೂಮಿಗೆ ಪರಿಹಾರವನ್ನು ಕೊಡುವುದು. ಆದರೆ ನಾನು ಹೇಳುತ್ತಿದ್ದೇನೆ ಇಲ್ಲಿ ಬಡವರಿಗೆ ಸರ್ಕಾರದವರು ಮನೆಗಳನ್ನು ಕಟ್ಟಿಕೊಳ್ಳಲು ಜಮೀನನ್ನು ಶೀಘ್ರವಾಗಿ ಹಂಚಬೇಕಾಗಿರುವುದರಿಂದ ಮೊದಲು ಸರ್ಕಾರದವರ ವಶಕ್ಕೆ ಭೂಮಿಯನ್ನು ತೆಗೆದುಕೊಳ್ಳಿ. ಅದನ್ನು ಬಡವರಿಗೆ ಮೊದಲು ಹಂಚಿ ಬಿಡಿ. ಆನಂತರ ಪರಿಹಾರವನ್ನು ಕೊಡತಕ್ಕ ವಿಚಾರದಲ್ಲಿ ವ್ಯವಹಾರ ಕೋರ್ಟಿನಲ್ಲಿ ಎಷ್ಟು ದಿನಗಟ್ಟಲೆ ಬೇಕಾದರೂ ನಡೆಯಲಿ ಅವರ ಬಗ್ಗೆ ನಮ್ಮ ವಿರೋಧವಿಲ್ಲ. You can simply add, "may by notification acquire such land and take possession forthwith". ಇದರ ವಿಚಾರದಲ್ಲೇ ನಾನು ಒಂದು ತಿದ್ದುಪಡಿಯನ್ನೂ ಕೂಡ ಕಳುಹಿಸಿದ್ದೇನೆ. ಅದಕ್ಕಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ.

ಇನ್ನು ಬಹಳ ಮುಖ್ಯವಾದ ಮೂರನೇ ವಿಚಾರ ಏನೆಂದರೆ: ನಾಲ್ಕನೆ ಪುಟದಲ್ಲಿ ಹೇಳಿರತಕ್ಕ ಕ್ಲಾಜ್ (ಜಿ) ಮತ್ತು ಈ ಕ್ಲಾಜ್ (ಟಿ) ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕು. ಆದರೆ ಇಲ್ಲಿ ಪರಿಹಾರ ಕೊಡುವುದಕ್ಕೆ 'ಅಮೌಂಟ್' ಎಂಬ ಪದವನ್ನು ಹಾಕಿದ್ದಾರೆ. ಬಹುಶಃ ನಮ್ಮ ರಾಜ್ಯಾಂಗಕ್ಕೆ ತಿದ್ದುಪಡಿ ಆದ ನಂತರ 'ಕಾಂಪನ್‌ಸೇಷನ್' ಎಂದು ಕರೆಯುವುದಕ್ಕೆ ಬದಲು 'ಅಮೌಂಟ್' ಎಂದು ಹೇಳಿದ್ದಾರೆಂದು ಕಾಣುತ್ತದೆ. ಆದರೆ ಇಲ್ಲಿ ಹೀಗೆ ಹೇಳಿದ್ದಾರೆ.

> "The provisions of the Land Acquisition Act, 1894 (Central Act I of 1894) as amended by the Land Acquisition (Mysore Extension and Amendment) Act, 1961 shall, mutatis mutandis, apply in respect of enquiry and award by the Duputy Commissioner, the reference to Court, the apportionment of amount and the payment of amount in respect of lanbs acquired under this Act."

ಇಲ್ಲಿ ಹೇಳಿರತಕ್ಕ ಪ್ರಕಾರ ಪರಿಹಾರ ಕೊಡುವುದಕ್ಕೆ ಹೋದರೆ ಒಂದಕ್ಕೊಂದು ಕಾಂಟ್ರಡಿಕ್ಟರಿ ಆಗುತ್ತದೆ. ಹಿಂದಿನ ಮೈಸೂರು ಲ್ಯಾಂಡ್ ಆಕ್ವಿಜಿಷನ್ ಆಕ್ಟಿನಲ್ಲಿ ಹೇಳಿದ್ದುದಕ್ಕೂ ಮತ್ತು ಇಲ್ಲಿ ಹೇಳಿರುವುದಕ್ಕೂ ಯಾವ ವ್ಯತ್ಯಾಸವೂ ಇದ್ದ ಹಾಗೆ ಕಂಡುಬರುವುದಿಲ್ಲ. ಇಲ್ಲಿ ಸರ್ಕಾರದವರು ನಿಗದಿ ಮಾಡಿದ ಹಣವನ್ನು ಕೊಡಬೇಕೇ? ಇಲ್ಲವೇ ಮಾರುಕಟ್ಟೆಯ ಬೆಲೆಯನ್ನು ಕೊಡಬೇಕೇ? ಯಾವುದೆಂಬುದು ಖಚಿತವಾಗಿ ಗೊತ್ತಾಗುವುದಿಲ್ಲ. ಈಗಲೂ ಸರ್ಕಾರದವರು 'ಲಾ' ಆಫೀಸರ್ ಯವರಿಂದ ವಿರ್ಮಶೆಮಾಡಿಕೊಂಡು ಇದರ ಬಗ್ಗೆ ತೀರ್ಮಾನಕ್ಕೆ ಬರಬೇಕೆಂದು ಹೇಳುತ್ತಿದ್ದೇನೆ. ಇದೇ ವಿಚಾರದಲ್ಲಿ ಈ ದಿವಸ ಬೆಳಿಗ್ಗೆ ಪತ್ರಿಕೆಯಲ್ಲಿ ನಾಗೆಪುರಕ್ಕೆ ಸಂಬಂಧಪಟ್ಟ ಹಾಗೆ ಒಂದು ಕೇಸು ಸುಪ್ರೀಂ ಕೋರ್ಟಿನ ಮುಂದೆ ಬಂದು ತೀರ್ಮಾನವಾಗಿದೆ. ಅದರಲ್ಲಿ ಈ ಪರಿಹಾರದ ಪ್ರಶ್ನೆಯನ್ನೆ ಹೇಳಿದ್ದಾರೆ

5-00 p.m.

They have struck down on the ground that they have discrimi-nated between two Acts. My feeling is that this has to be looked into. I am not an Advocate and cannot go into all this. The whole Act may be struck down later on. This has to be looked into with greater care.

Sri D. B. KALMANKAR.—Is this decesion of the Court taken after passing of the 25th Amendmant.

Sri M. S. KRISHNAN.—This is given after passing of the 25th Amendment.

Sri B. BASAVALINVAPPA.—In which paper has it appeared.

Sri M. S. KRISHNAN.—I am referring to DECCAN HERALD. It must have appeared in all papers. The point is this. Whether one will contradict the other or not is a matter which has to be examined in greater detail. It has to be framed in such a manner that it should not contradict any other enactment which has been passed. That is my humble submission.

With these two changes, I think we should support this Bill Thank you very much.

†ಶ್ರೀ ಎಚ್. ಜಿ ಚನ್ನಪ್ಪ (ಮಾಗಡಿ) —ಮಾನ್ಯ ಸಭಾಪತಿಗಳೇ, ಈಗ ಈ ಸೈಟುಗಳನ್ನು ಅಕ್ವೈರ್ ಮಾಡುವ ವಿಷಯದಲ್ಲಿ ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದರ ವಿಷಯದಲ್ಲಿ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಸೈಟುಗಳನ್ನು ೩೦ ದಿವಸಗಳೊಳಗೆ ಅಕ್ವೈರ್ ಮಾಡಿ ಯಾರು ಸೈಟು ಇಲ್ಲದೆ ಇರತಕ್ಕ ಜನರು ಇದ್ದಾರೋ ಅವರಿಗೆ ಕೊಡಬೇಕಾದುದೆಂಬ ಒಂದು ನಿಯಮಾವಳಿಯು ನಿಜವಾಗಿಯೂ ಬಹಳ ಸ್ವಾಗತಾರ್ಹವಾದ ವಿಷಯ. ನಾನು ನೋಡಿದ ಹಾಗೆ ಸುಮಾರು ೧೦-೧೨ ವರ್ಷಗಳಿಂದಲೂ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ನಡೆದು ಅನೇಕ ಕೇಸುಗಳು ತೀರ್ಮಾನವಾಗದೆ ಇನ್ನೂ ಕೋರ್ಟಿನಲ್ಲಿಯೇ ಬಿದ್ದು ಕೊಳೆಯತ್ತಾ ಇವೆ. ಇದರಿಂದ ಅನೇಕ ಜನರ ಬಹಳವಾಗಿ ನರಳುತ್ತಾ ಇದ್ದಾರೆ. ಇದೇ ಸಂದರ್ಭದಲ್ಲಿ ಅಧಿಕಾರಿಗಳೂ ಕೂಡ ಜಮೀನ್ದಾರರ ಕಡೆ ಖಾಲಿ ಸೈಟುಗಳನ್ನು ಅಕ್ವೈರು ಮಾಡದೆ ಇರುವುದಕ್ಕೆ ಏನೇನು ಬೇಕೋ ಅದನ್ನೆಲ್ಲಾ ಮಾಡುತ್ತಾ ಇರುವ ನಿದರ್ಶನಗಳೂ ಇವೆ. ಅದೇನೇ ಇರಲಿ ಯಾವನಿಗೆ ಮನೆ ಇಲ್ಲವೋ ಅಂತಹವನಿಗೆ ಸೈಟು ಕೊಡುವ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಅತಿಜಾಗ್ರತೆಯಾಗಿ ಈ ಕಾನೂನನ್ನು ಜಾರಿಗೆ ತಂದು ಆ ಸೌಲಭ್ಯ ಎಲ್ಲರಿಗೂ ದೊರಕಬೇಕೆಂಬುದೇ ನಮ್ಮ ಆಶೆ. ಈ ಮಧ್ಯೆ ಅನೇಕ ಸೈಟುಗಳು ಅಕ್ವೈರ್ ಆಗಿ ಈಗ ಪಾಳು ಬಿದ್ದಿವೆ. ಇದರಿಂದ ಈ ಕಡೆ ವ್ಯವಸಾಯಕ್ಕೆ ಪ್ರಯೋಜನವಿಲ್ಲ. ಆ ಕಡೆ ಮನೆಗಳನ್ನೂ ಕಟ್ಟಿಲ್ಲ. ಆ ಸ್ಥಳವನ್ನು ತಿಪ್ಪೆಗುಂಡಿಯಂ ಹಾಗೆ ಕಸ ಹಾಕುವುದಕ್ಕೆ ಮತ್ತು ಇನ್ನೂ ಬೇರೆ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆ. ಅಂತೂ ಅದು ದುರೂಪಯೋಗವಾಗುತ್ತಿದೆ. ಆ ರೀತಿ ಆದರೆ ಸರ್ಕಾರದವರು ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದಮೇಲೆ ಅಂತಹ ಭೂಮಿಯನ್ನು ಯಾವ ವಿಧದಲ್ಲಿಯೂ ವ್ಯರ್ಥವಾಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಆದರ ಮೇಲೆ ತಕ್ಷಣ ಜವಾಬ್ದಾರಿ ತೆಗೆದುಕೊಂಡು ಅವನಿಗೆ ಸಾಲದ ರೂಪದಲ್ಲಿ ಮಂಜೂರುತ್ತಾಗಿ ಬರೀ ಹಣವನ್ನು ಕೊಡಬಾರದು. ಅಂತಹವರಿಗೆ ಬರಿ ಮನೆಗಳನ್ನು ಕಟ್ಟಿಸಿಕೊಡಬೇಕು. ಆದರೆ ಅವರವರ ಆದಾಯಕ್ಕೆ ತಕ್ಕಂತೆ ಮನೆಗಳನ್ನು ಕಟ್ಟಿಸಿಕೊಡಬೇಕು. ಹೌಸಿಂಗ್ ಬೋರ್ಡ್ ಮತ್ತು ಟ್ರಸ್ಟ್ ಬೋರ್ಡ್ ಮಾಡುವಹಾಗೆ ಮಾಡಬೇಕು. ಈ ರೀತಿ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಒಂದು ಪಾಲಿಸಿ ಹಾಕಿಕೊಂಡು ಸೈಟನ್ನು ಅಕ್ವೈರುಮಾಡಿ ಪೊಸೆಷನ್ ಚೀಟಿ ಕೊಟ್ಟರೆ ಅತನಿಗೆ ಹಣದ ಅನಾನುಕೂಲದಿಂದ ಮನೆಕಟ್ಟಿಕೊಳ್ಳುವುದಿಲ್ಲ, ವ್ಯವಸಾಯಕ್ಕೆ ಅನುಕೂಲವಾಗುವುದಿಲ್ಲವೆಂದು ಇವತ್ತಿನದಿವಸ ಭೂಮಿ ಇಲ್ಲವೆಂದು ಒದ್ದಾಡುತ್ತಿರುವ ಪರಿಸ್ಥಿತಿ ಬಂದಿದೆ. ಭೂಮಿ ನಿಷ್ಪ್ರಯೋಜನವಾಗಿ ಉಳಿಯುವುದಕ್ಕೆ ಅವಕಾಶ ಮಾಡಕೂಡದು. ಸರ್ಕಾರದವರು ಮುಂದೆ ಬಂದು ಯಾರಿಗೆ ಈಗ ಸೈಟು, ಮನೆ, ಜಾಗ ಇಲ್ಲದೆ ತೊಂದರೆಪಡುತ್ತಿದ್ದಾರೋ ಅಂತವರಿಗೆ ಮಾತ್ರ ಇಂತಹ ಅನುಕೂಲಗಳನ್ನು ಮಾಡಿಕೊಡಬೇಕೆಂದು ಹೊರಟಿರುವಾಗ, ಕೇವಲ ಬರೀ ಸೈಟನ್ನು ಮಾತ್ರ ಕೊಟ್ಟಿದ್ದೇವೆಂದು ಹೇಳುವುದರಲ್ಲಿ ಅವರೂರೂ ತೃಪ್ತಿಯಾಗುವುದಿಲ್ಲ. ಬರೀ ಸೈಟುಕೊಟ್ಟ ಮಾತ್ರದಿಂದ ಮನೆಯಲ್ಲಿ ವಾಸಮಾಡುವುದಿಲ್ಲ. ಹಣವನ್ನು ಸಾಲದ ರೂಪದಲ್ಲಿ ಹೆಚ್ಚಿನ ಕಂತುಗಳ ರೂಪದಲ್ಲಿ ಹಣವನ್ನು ಸುಲಭ ಬಡ್ಡಿಯಲ್ಲಿ ಕೊಟ್ಟು ಅದನ್ನು ಸುಲಭ ಕಂತುಗಳಲ್ಲಿ ತೀರಿಸುವ ವ್ಯವಸ್ಥೆ ಮಾಡಬೇಕು. ಮನೆಗಳನ್ನು ಅವರಿಗಾಗಿ ಕಟ್ಟಿಸಿಕೊಟ್ಟು ಅವುಗಳನ್ನು ಯೋಗ್ಯವಾಗಿ ಬಿಟ್ಟುಕೊಡಬೇಕು. ಹಾಗೆ ಮಾಡದೆ ಕೇವಲ ಹಣವನ್ನು ಕೊಡುತ್ತೇನೆಂದು ಹೇಳಿದರೆ, ಅದರಿಂದ ವಿಪರೀತವಾಗಿ ದುರೂಪಯೋಗವಾಗುತ್ತದೆಂದು ಹೇಳುತ್ತೇನೆ. ಅನೇಕ ನಿದರ್ಶನಗಳು ಆದಕ್ಕಿವೆ. ರೂರಲ್ ಹೌಸಿಂಗ್ ಬೋರ್ಡಿನಲ್ಲಿ ಮನೆಗಳಿಗಾಗಿ ಸಾಲವನ್ನು ಕೊಡುವಾಗ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗದ ರೀತಿಯಲ್ಲಿ ಅನ್ಯಾಯವಾಗುತ್ತಿದೆ. ನಾವು ನೋಡಿದ ಹಾಗೆ ಹಂತಹಂತಗಳಲ್ಲಿಯೂ ದುರೂಪಯೋಗವಾಗುತ್ತಿದೆ. ಆ ಥಾದ್ದಕ್ಕೆ ಅವಕಾಶ ಕೊಡದೆ ಮನೆಗಳನ್ನು ಕಟ್ಟಿಸಿಕೊಂಡಿರುವ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿದರೆ

ಆಗ ನಿಮ್ಮ ಉದ್ದೇಶ ಸಾರ್ಥಕವಾಗುತ್ತದೆ. ಆ ರೀತಿಯಾಗಿ ಮಾಡದೇಹೋದರೆ, ಈ ಕಡೆ ಜಮೀನಾಂ ವ್ಯವಸಾಯಕ್ಕೆ ಯೋಗ್ಯವಿಲ್ಲ. ಅಲ್ಲಿ ವಾಸ ಮಾಡುವುದಕ್ಕೆ ಅನುಕೂಲವಾಗಿಲ್ಲವೆಂದು ಹೇಳಬಹುದು. ಆಗ ಇದು ಒಂದು ಆಶಾದಾಯಕವಾಗುತ್ತದೆ. ಆದ್ದರಿಂದ ಈ ಅಮೆಂಡ್‌ಮೆಂಟ್ ಜೊತೆಯಲ್ಲಿ ಈ ಒಂದು ಕಾನೂನನ್ನು ಜಾರಿಗೆ ತಂದರೆ ಪುಣ್ಯವಾಗುತ್ತದೆಂದು ಖಡಾಖಂಡಿತವಾಗಿ ನಾನು ಒತ್ತಾಯದಿಂದ ಹೇಳುತ್ತಿದ್ದೇನೆ. ಮೊನ್ನೆ ಅಕ್ವಿಸಿಷನ್ ಆಗಿರತಕ್ಕದ್ದು ಕೆಲವಾರು ಇವೆ. ವರ್ಷಾನುಗಟ್ಟಲೆಯಿಂದ ಅಕ್ವಿಸಿಷನ್ ಆಗಿರತಕ್ಕದ್ದು ಸಹ ಕೆಲವಾರು ಇವೆ. ಬಹಳ ವರ್ಷಗಳಿಂದ ತೀರ್ಮಾನವಾಗದೇ ಉಳಿದಿರತಕ್ಕದನ್ನು ಅತಿ ಜಾಗ್ರತೆಯಾಗಿ ತೀರ್ಮಾನಮಾಡಲು ಪ್ರಯತ್ನಮಾಡಬೇಕು. ಸೂಕ್ತ ಕಂಡಲ್ಲಿ, ಸೈಟನ್ನು ಸ್ವಾಧೀನಕ್ಕೆ ತೆಗೆದುಕೊಂಡು ಸರ್ಕಾರದವರೇ ಮನೆ ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕು. ನನ್ನಲ್ಲಿ ಬೇಕಾದರೆ ೨೦ ನಿದರ್ಶನಗಳಿವೆ. ಕೋರ್ಟಿಗೆ ಹೋಗಿ ಅನೇಕ ಜನಗಳು ಸಿಕ್ಕಾಪಟ್ಟೆ ಕೇಸುಗಳನ್ನು ಹಾಕಿದ್ದರೂ ಅನೇಕರಿಗೆ ಸೈಟುಗಳು ಸಿಕ್ಕಿಲ್ಲ ಇಂತಹ ಅವ್ಯವಸ್ಥೆ ಆಗುತ್ತಿದೆ. ಅಂಥದಕ್ಕೆ ಅವಕಾಶ ಕೂಡದು. ನಾವು ೩೦ದಿವಸದೊಳಗೆ ಜಮೀನು ಕೊಡುತ್ತೇವೆಂದು ಹೇಳಿದರೆ. ಅವರ ಒಂದು ಅಭಿಪ್ರಾಯ ದಲ್ಲಿ ಅವರಿಂದ ಏನು ಉತ್ತರ ಬಂದರೂ ಅವಕಾಶ ಅದಕ್ಕೆ ಕೊಟ್ಟಿದೆ. ಅದು ಯೋಗ್ಯವೇ ಅಲ್ಲವೇ ಎಂಬುದನ್ನು ಸರ್ಕಾರ ಪರಿಗಣನೆಗೆ ತೆಗೆದುಕೊಳ್ಳಬೇಕು. ಸೈಟುಗಳನ್ನು ವಿಂಗಡಿಸಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಏಕೆಂದರೆ ಹಳ್ಳಿಗಳಲ್ಲಿ ವೈಷಮ್ಯ ಬಹಳವಾಗಿ ಇರುತ್ತದೆ. ಅಲ್ಲಿ ಒಂದು ವೇಳೆ ಅಕ್ವಿಸಿಷನ್ ಆಫೀಸರುಗಳು ಹೋದಾಗ, ಅವರಿಗೆ ಆಗದೇ ಇರುವ ಪಾರ್ಟಿಗಳೂ ಸಹ ಇದ್ದಾರೆ. ಅನೇಕ ವೇಳೆ ಅವರ ರುಜುಗಳನ್ನು ದುರುಪಯೋಗ ಮಾಡಿಕೊಂಡು ಸೈಟುಗಳನ್ನು ಕೊಟ್ಟಿರುತ್ತಾರೆ. ಇದರ ಹಿನ್ನಲೆ, ಇದರ ಉದ್ದೇಶ ಏನಿದೆಯೆಂಬುದನ್ನು ಯೋಚನೆ ಮಾಡಿ ಕೆಲಸಕಾರ್ಯ ಗಳನ್ನು ಮಾಡಬೇಕು. ಅಲ್ಲಿ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಕೆಲವರು ಪೂರ್ಣವಾಗಿ ಈ ವಿಷಯ ಗಳನ್ನು ವಿಮರ್ಶೆ ಮಾಡಿದರೂ ನ್ಯಾಯ ದೃಷ್ಟಿಯಿಂದ ಆರೋಗ್ಯ ದೃಷ್ಟಿಯಿಂದ ಮತ್ತು ಇತರ ಎಲ್ಲಾ ದೃಷ್ಟಿಗಳಿಂದಲೂ ಅಲ್ಲಿ ವಾಸಮಾಡುವುದಕ್ಕೆ ಯೋಗ್ಯ ಜಾಗ ಇದೆಯೆಂದು ಕಂಡು ಬಂದಮೇಲೆ ಅದನ್ನು ಅತಿ ಜಾಗ್ರತೆಯಾಗಿ ಅಕ್ವೈರ್‌ಮಾಡಿ ಸೈಟುಗಳನ್ನು ವಿಂಗಡಿಸಿ ಆ ಮನೆಗಳನ್ನು ಸರ್ಕಾರದವರೇ ಕಟ್ಟಿ ಅವರಿಗೆ ಸ್ವಾಧೀನಕ್ಕೆ ಕೊಡಬೇಕು. ಈಗ ಅನೇಕ ಸ್ಕೀಮುಗಳಲ್ಲಿ ಹಣ ಕೊಟ್ಟಿರುತ್ತಾರೆ. ಅವರಲ್ಲಿ ಎಷ್ಟೋ ವೀಕರ್ ಸೆಕ್ಷನ್‌ಗಳೂ ಇರುತ್ತವೆ. ನನ್ನ ತಾಲ್ಲೂಕಿನಲ್ಲಿ ೮-೧೦ ಹರಿಜನ ಕಾಲೊನಿಗಳನ್ನು ಮಾಡಲು ಸಬಂಧಪಟ್ಟ ರಿಕಾರ್ಡುಗಳನು ಹೌಸಿಂಗ್ ಬೋರ್ಡಿಗೆ ಕಳುಹಿಸಿಕೊಟ್ಟಿದ್ದಾರೆ ಅದು ಇವತ್ತಿನವರೆಗೂ ಇನ್ನೂ ಸರ್ಕಾರದಲ್ಲಿ ಮಂಜೂರಾಗಿಲ್ಲ. ಇದರಿಂದ ದೇಶಕ್ಕೆ ತುಂಬಾ ನಿರಾಶೆಯಾಗುತ್ತಿದೆ. ಈ ರೀತಿ ಆಗಬಾರದು, ನಾನು ಮಂತ್ರಿಗಳಲ್ಲಿ ವೈಯಕ್ತಿಕವಾಗಿ ಕೇಳುತ್ತೇನೆ. ಈ ರೀತಿಯಲ್ಲಿ ಇನ್ನು ಮುಂದೆ ಡಿಲೆ ಆಗಬಾರದು. ಏನಾದರೂ ಒಂದು ರೀತಿಯಲ್ಲಿ ಆಜ್ಜೆಮಾಡಿ ಅವರೂ ಸಹ ಅಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟು ಬರೀ ಖಾಲಿ ಸೈಟುಗಳನ್ನೂ ಕೊಡದೆ ಇರುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯಮಾಡಿ ಹೇಳುತ್ತೇನೆ.

† SRI D. B KALMANKAR (Afzalpur) MADAM SPEAKER:— I wholeheartedly welcome this laudable measure, which has got a very laudable purpose to serve, ie., to distribute houses sites to the weaker sections and the Scheduled Castes and the Scheduled Tribes. This was long awaited. As stated by the Hon. Minister, about 2 lakhs of house sites have been distributed out of Government land and now, the work is almost stopped. Now in order that we can do justice to the weaker sections of society, this measure has been brought in. Madam, some hon. Members spoke as if this government is not doing anything in accordance with the promises it made at the time of the elections, but I am sorry that the hon. Members who criticised the Government on this are not happily placed, because in this short span of five to six months, the Government has done very good work, which work was not done by the other Governments. And, definitely we will have to appreciate the measures taken by this Government, particularly for the weaker and neglected sections of society It is to the credit of this Government that instead of looking to the comforts and pleasures of the higher sections of society, it has come to the rescue of the down-trodden and

(SRI D.B. KALMANKAR)

weaker sections. At least, this Government has made a right and earnest effort in the right direction to solve the problems of these sections. I have nothing to say in favour of the Governments in the past, but I am saying in favour of this Government. So, what I say is, this is a very important piece of legislation which is going to help the weaker sections.

Now, I think there is some confusion regarding the clauses in the Bill. After Clause 3, there should be Class IV; there is no Class IV and there is only Class V. So, instead of Class IV, Class V is written.

Now, as it was rightly suggested, this partitular piece of legislation has to be made applicable for acquisition of land whether in rural area or urban area. So, in order that this legislation may not be challenged in the Court, I also feel that in the Statements of Objects and Reasons, changes may be made, because there is a reference that the Government of India have recently introduced a scheme for provision of house sites to families of landless workers in rural areas under which 100 per cent assistance is provided to the States towards acquisition of land and also towards development of house sites upto Rs. 150/- per site. If the scheme is only for the rural areas, I think this Bill may be applied to urban areas and one more sentence may be added so that the confusion is removed, so that when it is also made applicable to urban areas that particular concession that is going to be given by the Government of India may also be extended to the urban area people.

Now, it was stated by the Hon. Minister that this Bill is being brought to see that the houses sites are acquired within a period of thirty days. But by reading the Cl. (3), it is seen that in the first instance 30 days are required. Thereafter, a long procedure. prescribed under the Land Acquisition Act, which is also made applicable under clause 6 will have to be followed wherein thare is a long procedure. Then again the word 'compensetion' is used that also may be considered and the enactment made in such a manner that it is not later on questioned by the court. In view of the 25th Amendmeent to the Constitution, it requires to be suitably amended.

In the first instance the period is 30 days then again enqniry has to be done. which takes some time and then again another 30 days. Under Clause 6 it is a state i: 'Where any land is vested in the State Government under sub section (5), the State Government may, by notice in writing, order any person who may be in possession of the land to surrender or deliver possession teherof to the State Government or any person duly authorised by it in this be half within thirdy days of the service of the notice' Under clause (7) it is mentioned: 'If any person refuses or fails to comply with an order made under sub-ccsetion (5), the State Government or any officer

authrised by the State Governament in this behalf may take possition of the land and may for that purpose use such force as may be necessary So, taking possession is, admittedly after preleminary notice to the land holder for which 30 days are given, but thereafter,he will go and file an objection saying that the amount payable is not adequate and so a long precedure is involved and thereafter, again there is the period of 30 days. So, the purpose of giving possession of the land within 30 days from the start of the proceedings will not be served.

So, I submitt that necessary amendment may be made It is only then that we can do justice to the weaker sections of the rural areas. I have also gone through this judgment It has been struck down saying that it is discriminatory under Article 14 of the Constitution. This implication also may be considered.

Before we rush through this legislation, all these points may be considered and suitable amendments to this legislation may be brought. With these words, I conclude.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ)—

ಮಾನ್ಯ ಸಭಾಧ್ಯಕ್ಷಣಿಯರೆ, ಮಾನ್ಯ ಗೃಹನಿರ್ಮಾಣ ಖಾತೆಗೆ ಸಂಬಂಧಪಟ್ಟ ಮಂತ್ರಿಯವರು ಈ ಸಭೆಯ ಮುಂದೆ ಒಂದು ಬಿಲ್ಲನ್ನು ತಂದಿದ್ದಾರೆ, ಅದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಇವರು ಮನೆಯ ನಿವೇಶನಗಳನ್ನು ಮಾಡುವುದಕ್ಕೋಸ್ಕರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕಾಲ ವಿಳಂಬವಾಗದ ರೀತಿಯ ಒಂದು ಉದ್ದೇಶ ಇಟ್ಟುಕೊಂಡು ಈ ಮಸೂದೆಯನ್ನು ತಂದಿದ್ದಾರೆ. ನಾನು ಹೆಚ್ಚು ಇದರಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ ಈಗ ಏನು ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ವಾಸಕ್ಕೆ ಮನೆಗಳು ಅಥವಾ ಬೇಕಾದ ಸೈಟುಗಳು ಇಲ್ಲದೆ ತೊಂದರೆ ಪಡುತ್ತಿದ್ದಾರೆ, ಆ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಈ ಮಸೂದೆಯನ್ನು ತಂದಿರುವುದರಿಂದ ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಯವರು ಇದರ ಬಗ್ಗೆ ಸ್ವಲ್ಪ ವಿವರಣೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಸೆಕ್ಷನ್ ೩ ರಲ್ಲಿ ಸಬ್ ಕ್ಲಾಸ್ ೫ ಈ ರೀತಿ ಹೇಳುತ್ತದೆ:-

> " On the publication in the official Gazette of the declaration under sub-section (4), the land shall vest absolutely in the State Government free from all encumbrances"

ತಮಗೆ ಹಳ್ಳಿಯ ಜೀವನ ಗೊತ್ತಿದ್ದರೆ, ಗ್ರಾಮಗಳ ಭಾಗಗಳಲ್ಲಿ ಬಹು ದೊಡ್ಡ ಜಮೀನು ಇರುವುದಿಲ್ಲ ಏನಾದರೂ ಒಂದು ಎಕರೆ, ಎರಡುಎಕರೆ ಹುಟ್ಟಿನ ಕಣ ಮಾಡಿಕೊಳ್ಳುವುದಕ್ಕೆ ಇಟ್ಟುಕೊಂಡಿರುತ್ತಾರೆ ಒಂದು ವೇಳೆ ಅಂಥ ಭೂಮಿಗಳನ್ನು ತೆಗೆದುಕೊಳ್ಳತಕ್ಕಂತಹ ಅವಶ್ಯಕತೆ ಬಂದಾಗ ತೆಗೆದುಕೊಳ್ಳಬೇಕಾಗುತ್ತದೆ. ಆದರ ಮೇಲೆ ತಕಾವಿ ಲೋನ್ ಇತ್ಯಾದಿ ಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ ಏನು ಮಾಡುತ್ತೀರಿ ಎಂದು ಮಂತ್ರಿಯವರು ಹೇಳಬೇಕು.

ಆದರೆ ಇಲ್ಲಿ ಕಾಂಪೆನ್‌ಸೇಷನ್ ಎನ್ನುವುದನ್ನು ಕಿತ್ತು ಹಾಕಿದ್ದಾರೆ. ಅದಕ್ಕೆ ಒಂದು ಹೊಸ ತಿದ್ದುಪಡಿಯನ್ನು ಮೂಡಿ ಅಮೌಂಟ್ ಎಂದು ತಂದಿದ್ದಾರೆ. ಆ ಅಮೌಂಟನ್ನು ಯಾರಾದರೂ ಒಬ್ಬರೂ ಆಫೀಸರು ನಿರ್ಣಯ ಮಾಡುತ್ತಾರೆ. ಅವರು ನಿರ್ಣಯ ಮಾಡಿದ ಅಮೌಂಟಿಗಿಂತ ಆ ಜಮೀನಿನ ಮೇಲೆ ಇರತಕ್ಕ ಎನ್‌ಕಂಬರೆನ್ಸ್ ಜಾಸ್ತಿ ಇದ್ದರೆ ೨-೩ ಆಧಾರ ಭೋಗ್ಯ ಇದ್ದರೆ ಏನು ಮಾಡುತ್ತೀರಿ ? Whether that owner of the land has to clear the encumbrance and then handover possession to the Government or whether the government is going to take responsibility to clear the encumbrance which is already there ? ಈ ಒಂದು ಅನಾಮಲೀಸ್ ಇದರಲ್ಲಿ ಇದೆ. ಇಂಥಾ ಸಂದರ್ಭದಲ್ಲಿ ಏನು ಮಾಡುತ್ತೀರಿ ಎನ್ನುವುದನ್ನು ತಿಳಿಸಿಲ್ಲ. ಸಣ್ಣಸಣ್ಣ ಹಿಡುವಳಿ ಜಮೀನು ಇರತಕ್ಕವರಿಗೆ ವೀಕರ್ ಸೆಕ್ಷನ್ನಿಗೆ

(ಶ್ರೀ ಎಚ್.ಡಿ. ದೇವೇಗೌಡ)

ಸಹಾಯ ಮಾಡುವ ವ್ಯವಸ್ಥೆ ಇದರಲ್ಲಿ ಇಲ್ಲ. ಈಗ ಕೆಲವರು ೧ಎಕರೆ, ೨ ಎಕರೆ, ಅರ್ಧ ಎಕರೆ ಇರುವಂಥವರು ಆ ಜಮೀನನ್ನು ಕಳೆದುಕೊಂಡ ಮೇಲೆ ಅವರಿಗೆ ಬೇರೆ ಯಾವುದೂ ಉಳಿಯುವುದಿಲ್ಲ. ಸರ್ಕಾರದವರು ವಶಪಡಿಸಿಕೊಂಡ ಜಮೀನಿಗೆ ೨೦೦-೩೦೦ ರೂಪಾಯಿಗಳ ಕಾಂಪೆನ್‌ಸೇಷನ್ ಕೊಟ್ಟರೆ ಅವರು ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ. ಇಂಥಾ ಸಂದರ್ಭಗಳು ಬಂದಾಗ ಯಾವರೀತಿ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈಗ ೧೦ ಎಕರೆ ಜಮೀನು ಇರುವವನ ಹತ್ತಿರ ಒಂದೆರಡು ಎಕರೆಯನ್ನು ತೆಗೆದುಕೊಂಡರೂ ಪರವಾಯಿಲ್ಲ. ಆ ರೀತಿ ಇಲ್ಲದೆ ಒಂದೆರಡು ಎಕರೆ ಇದ್ದು ಅದನ್ನೂ ತೆಗೆದುಕೊಂಡರೆ ಅವನ ಗತಿ ಏನು ? That aspect must be taken into consideration. If you cannot incorporate in this amending Bill I suggest your doing it on an executive order or suitable modification may be made and preference must be given to those who are to lose land completely. ಈಗ ನಾನು ಹೇಳಿದ ಎರಡು ವಿಷಯಗಳ ಬಗ್ಗೆ ನನಗೆ ಕ್ಲಾರಿಫಿಕೇಶನ್ ಮಾಡಿದರೆ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಕೆ. ಪ್ರಭಾಕರ (ವರ್ತೂರು).—ಮಾನ್ಯ ಅಧ್ಯಕ್ಷರಿಯವರೇ ಈ ಪ್ರಜಾ ಪ್ರಭುತ್ವ ದೇಶಕ್ಕೆ ಬಂದಮೇಲೆ ಜನಗಳು ಕಾನೂನುಗಳ ಹೆಸರಿನಲ್ಲಿ ಏನೇನೋ ಕಷ್ಟಗಳನ್ನು ಅನುಭವಿಸಿ ನಿವೇಶನಗಳನ್ನು ಪಡೆಯುವುದರಲ್ಲಿ ತೊಂದರೆಗಳು ಉಂಟಾಗಿದ್ದವು. ಆದ್ದರಿಂದ ಈ ಒಂದು ಮಸೂದೆಯನ್ನು ಇಲ್ಲಿ ತಂದು ಜನಗಳಿಗೆ ಉಂಟಾಗತಕ್ಕ ತೊಂದರೆಗಳಿಗೆ ಪರಿಹಾರವನ್ನುಂಟು ಮಾಡುವ ರೀತಿಯಲ್ಲಿ ಸರ್ಕಾರದವರು ಪ್ರಯತ್ನ ಪಟ್ಟಿದ್ದಾರೆ. ಇದು ಒಂದು ಪ್ರಗತಿದಾಯಕವಾದ ಕಾನೂನು ಎಂದು ನಾನು ಭಾವಿಸುತ್ತೇನೆ. ಅದಕ್ಕೆ ನಾವು ಈ ಸರ್ಕಾರವನ್ನು ಮೆಚ್ಚಬೇಕಾಗಿದೆ. ೩೦ ದಿವಸಗಳಲ್ಲಿ ಸೈಟುಗಳನ್ನು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಧೋರಣೆಯನ್ನು ಸರ್ಕಾರದವರು ತಳೆದಿದ್ದಾರೆ. ಈಗ ಹಾಲಿ ಇರತಕ್ಕ ನಿವೇಶನವನ್ನು ಪಡೆಯತಕ್ಕ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಏನಿದೆ ಅದರ ಪ್ರಕಾರ ೯೦ ದಿವಸ ಎಂದು ಇತ್ತು. ಅದು ಹತ್ತಾರು ವರ್ಷಗಳಾದರೂ ರೆಗ್ಯುಲೇಟ್ ಆಗದೆ ತೀರ್ಮಾನವಾಗದೆ ಜನಸಾಮಾನ್ಯರಿಗೆ ಸರ್ಕಾರದ ಮೇಲೆ ಜಿಗುಪ್ಸೆಯುಂಟಾಗುತ್ತಿತ್ತು. ಈ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಭಾರತ ಸರ್ಕಾರದವರು ದೇಶದಲ್ಲಿರತಕ್ಕ ನಿರುದ್ಯೋಗಿಗಳಿಗೆ ಭೂಮಿ ಇಲ್ಲದೆ ಇರತಕ್ಕವರಿಗೆ ಬಡವರಿಗೆ ನಿವೇಶನಗಳನ್ನು ಕೊಡುವುದಕ್ಕೋಸ್ಕರ ಹಾಕಿರತಕ್ಕ ಯೋಜನೆಯನ್ನು ಸಂಸ್ಥಾನಾಮಳಿ ಕಾರ್ಯರೂಪಕ್ಕೆ ತರುವುದಕ್ಕೆ ಈ ಕಾನೂನನ್ನು ತರಬೇಕಾಯಿತು ಎಂದು ಹೇಳಿದ್ದಾರೆ. ಈ ಪ್ರಕಾರ ನೋಡಿದ್ದರಲ್ಲಿ ಒಂದು ಸೈಟನ್ನು ಲೆಕ್ಕದಲ್ಲಿ ಇಟ್ಟುಕೊಂಡು ೧೫೦ ರೂಪಾಯಿಗಳವರೆಗೆ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ತಗಲತಕ್ಕ ಹಣವನ್ನು ಭಾರತ ಸರ್ಕಾರದವರು ಕೊಡುತ್ತಾರೆ ಮತ್ತು ಅಕ್ವಿಜಿಷನ್‌ಗೆ ಸಂಬಂಧಪಟ್ಟ ಹಣವನ್ನು ಪೂರ್ತಿ ಅವರು ಕೊಡುತ್ತಾರೆ ಎಂದು ಹೇಳಿದ್ದಾರೆ. ಇದರಲ್ಲಿ ೧೫೦ ರೂಪಾಯಿ ಕೊಡುವುದು ಲೇಔಟ್ ಅಭಿವೃದ್ಧಿ ಮಾಡುವುದಕ್ಕೇ ಎನ್ನತಕ್ಕಂಥಾದ್ದು ವಿಶದವಾಗಿ ಕಾಣುವುದಿಲ್ಲ. ೧೫೦ ರೂಪಾಯಿಗಳನ್ನು ಯಾವ ಉದ್ದೇಶಕ್ಕಾಗಿ ಕೊಡುತ್ತಾರೆ ಎನ್ನುವುದನ್ನು ವಿಷದವಾಗಿ ರೂಲ್ಸ್‌ನ ಅಳವಡಿಸಬೇಕು ಎಂದು ನಾನು ಸೂಚನೆ ಮಾಡುತ್ತೇನೆ ೩೦ ದಿವಸಗಳಲ್ಲಿ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಆನೂಚಾನವಾಗಿ ಬಂದಿರತಕ್ಕ ರೆವಿನ್ಯೂ ಆಫೀಸರು ಮತ್ತು ಸಂಬಂಧಪಟ್ಟ ಶೇಕದಾರರು ೩೦ ದಿವಸಗಳು ಕಳೆತಿ ಬೇಗ ಎಂದು ಹೇಗಿದ್ದರೂ ಅಕ್ವಿಜಿಷನ್ ಆಕ್ಟ್ ಪ್ರಕಾರ ೯೦ ದಿವಸ ಇದೆಯೆಂದೂ ೩೦ ದಿವಸ ಕಳೆದ ಮೇಲೆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಆರ್ಡರನ್ನು ಕೊಡಬಹುದು. ಆದ್ದರಿಂದ ಈಗ ತಂದಿರತಕ್ಕ ಮಸೂದೆಯ ಪ್ರಕಾರ ಈ ಕೆಲಸವನ್ನು ಸಾಧನೆ ಆಗಬೇಕಾದರೆ ರೆವಿನ್ಯೂ ಆಫೀಸರ ಹೆಸರಿನಲ್ಲಿ ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರು ಇದ್ದರೆ ಅದರಿಂದ ಬಡಜನಗಳಿಗೆ ಸಹಾಯವಾಗಬಹುದು. ಏಕೆಂದರೆ ಈಗ ಹಾಲಿ ಇರತಕ್ಕ ರೆವಿನ್ಯೂ ಆಫೀಸರುಗಳು ಮತ್ತು ಶೇಕದಾರರು ಏನಿದ್ದಾರೆ ಅವರಿಗೆ ಈ ಕೆಲಸಗಳನ್ನು ತಡಮಾಡತಕ್ಕ ಮನೋಭಾವ ಅನುಚಾನವಾಗಿ ಬಂದಿದೆ. ಈ ಸಾಧನೆಯನ್ನು ಬೇಗ ಕಾರ್ಯಗತ ಮಾಡಬೇಕು ಎಂದರೆ ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಈ ಬಗ್ಗೆ ಆಲೋಚನೆ ಮಾಡಿ ಒಂದು ಸ್ಪೆಷಲ್ ಪವರ್ಸ್ ಅನ್ನು ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರಿಗೆ ಕೊಟ್ಟು ಈ ಕೆಲಸಗಳನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುವುದು ಸೂಕ್ತ ಅನಿಸುತ್ತದೆ.

ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ

"State Government has decided to implement the scheme on a massive scale and have issued orders in G. O. No. DPC 15 DRH 72" ಎಂದು ಹೇಳಿದ್ದಾರೆ. ಇದನ್ನು ಸರಿಯಾಗಿ ವಿಪದೀಕರಿಸಿದ್ದರೆ ಚೆನ್ನಾಗಿತ್ತು.

ಆ ಮೇಲೆ ಡೆಫಿನಿಷನ್‌ನಲ್ಲಿ ಕ್ಲಾಜ್ (೨) ಸಬ್‌ಕ್ಲಾಜ್ (೪) ರಲ್ಲಿ

"Weaker sections of people" means persons belonging to the Scheduled castes or Scheduled Tribes, landless labourers and such other class or classes of persons as the State Government may, having regard to their economic backwardness, by notification specify;" ಎಂದು ಹೇಳಿದ್ದಾರೆ. ಈ ರೀತಿ ಸರ್ಕಾರದವರು ಭೂಮಿಯನ್ನು ಆಕ್ವೈರ್ ಮಾಡಿಕೊಂಡು ಭೂಮಿ ಇಲ್ಲದೆ ಇರುವವರಿಗೆ ದುರ್ಬಲರಾದವರಿಗೆ ಹರಿಜನ ಗಿರಿಜನರಿಗೆ ಸುಮಾರು ೨ ಲಕ್ಷ ಸೈಟುಗಳನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಕೂಡ ಈ ಇಲಾಖೆಗೆ ಸಂಬಂಧಪಟ್ಟ ಶ್ರೀಮಾನ್ ಬಸವಲಿಂಗಪ್ಪನವರು ಪರ್ಸನಲ್ ಇಂಟರೆಸ್ಟ್ ತೆಗೆದು ಕೊಂಡು ಕಷ್ಟಪಟ್ಟು ಜನಗಳಿಗೆ ಲಕ್ಷಾಂತರ ಸೈಟುಗಳನ್ನು ಹಂಚಿದ್ದಾರೆ ಇದನ್ನು ನಾವು ಮೆಚ್ಚಬೇಕು. ಇದರಲ್ಲಿ ಇನ್ನೊಂದು ವಿಷಯವೇನೆಂದರೆ ಸರ್ಕಾರಿ ಜಮೀನಿನಲ್ಲಿ ಸೈಟು ಕೊಟ್ಟು ಕಾಲನಿ ಮಾಡಿದರೆ ಊರು ಬಿಟ್ಟು ಬಹಳ ದೂರ ಹೋಗಬೇಕಾಗುತ್ತದೆ. ಆದ್ದರಿಂದ ಊರಿನ ಪಕ್ಕದಲ್ಲಿ ಜಮೀನು ತೆಗೆದು ಸೈಟುಗಳನ್ನು ಕೊಟ್ಟರೆ ಸಾಮೂಹಿಕವಾಗಿ ಊರು ಬೆಳೆಯುತ್ತದೆ. ಅದು ಬಿಟ್ಟು ಊರು ಬಿಟ್ಟು ಬಹುದೂರದಲ್ಲಿ ಕಾಲೋನಿ ಮಾಡಿ ಸೈಟುಗಳನ್ನು ಕೊಟ್ಟರೆ ಅದು ಬಹುದೂರವಾಗಿ ವಿರೋಧಾಭಾಸವಾಗುತ್ತದೆ, ಜನಗಳ ಸಂಪರ್ಕ ಅಷ್ಟಾಗಿ ಇರುವುದಿಲ್ಲ. ಕೆಲವು ಕಡೆ ಕುಡಿಯುವುದಕ್ಕೆ ನೀರು ಇರುವುದಿಲ್ಲ, ತಿರುಗಾಡುವುದಕ್ಕೆ ರಸ್ತೆ ಇರುವುದಿಲ್ಲ.

ಒಂದು ವೇಳೆ ಈ ಎಲ್ಲ ಸೌಕರ್ಯಗಳನ್ನು ಮಾಡಿಕೊಟ್ಟರೂ ಸಹ ಅದೇ ಬೇರೆ ಗ್ರಾಮವಾಗಿಬಿಡುತ್ತದೆ. ಈ ರೀತಿ ಬೇರೆ ಗ್ರಾಮಗಳನ್ನು ಇವರಿಗೆ ಮಾಡಿಕೊಡುವುದರಿಂದ, ಅವರನ್ನು ವಾಸ್ತವವಾಗಿ ಬೇರೆ ಜನರಿಂದ ದೂರವಿರಿಸಿದಂತಾಗುತ್ತದೆ. ಈ ಒಂದು ದೋಷ ನಿಮ್ಮ ಮೇಲೆ ಬರುವುದರಿಂದ, ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂಬುದನ್ನು ತಿಳಿಸಬೇಕು. ಮುಖ್ಯವಾಗಿ ಇವರಿಗೆ ಊರ ಆಚೆ ಇರುವ ಗೋಮಾಳಗಳಲ್ಲಿ ಸೈಟ್‌ಗಳನ್ನು ಕೊಡುವುದಕ್ಕಿಂತ, ಊರ ಪಕ್ಕದಲ್ಲಿಯೇ ಇರುವ ನಿವೇಶನಗಳನ್ನು ಹಂಚುವುದು ಒಳ್ಳೆಯದು. ಈ ಬಡ ಜನರು ಊರು ಬಿಟ್ಟು ದೂರ ಹೋಗುವುದನ್ನು ತಪ್ಪಿಸಬೇಕು. ಇವರಿಗೆ ಕಾಡಿನಲ್ಲಿ, ಬಂಜರು ಭೂಮಿಯಲ್ಲಿ ನಿವೇಶಗಳನ್ನು ಮಾಡಿಕೊಡುವುದು ಸರಿಯಲ್ಲ. ಆ ರೀತಿ ಮಾಡಿಕೊಟ್ಟರೆ ಅದು ಪ್ರತ್ಯೇಕವಾದ ಗ್ರಾಮವಾಗುತ್ತದೆಯೇ ಹೊರತು, ವಿಲೇಜ್ ಎಕ್ಸ್‌ಟೆನ್‌ಷನ್ ಆಗುವುದಿಲ್ಲ. ಊರ ಆಚೆ ಅವರನ್ನು ಕಳಿಸಿಬಿಟ್ಟರೆ ಅವರಲ್ಲಿ ಸಂಘಶಕ್ತಿ ಎಂಬುದು ಕಡಿಮೆಯಾಗುತ್ತದೆಂಬ ವಿಶ್ವಾಸ ಕಡಿಮೆಯಾಗುತ್ತದೆ. ಹಿಂದೆ ಇಂಗ್ಲೆಂಡ್‌ನಲ್ಲಿ ಒಂದು ಸಲ ಆಲ್ಲಿನ ಸರ್ಕಾರದವರ, ಬಡಜನರನ್ನೆಲ್ಲಾ ಕಾಡಿಗೆ ಕಳಿಸಿ ಅಲ್ಲಿ ನಿವೇಶಗಳನ್ನು ಒದಗಿಸಿಕೊಟ್ಟರು ನಂತರ ಆ ಜನರು ಬಹಳ ಕಷ್ಟಗಳನ್ನು ಅನುಭವಿಸಿದರಂ. ಆದೇ ರೀತಿ ಇಲ್ಲಿಯೂ ಮಾಡುವುಕ್ಕೆ ಹೋಗಬಾರದು. ಯಾರಿಗೆ ನಿವೇಶನಗಳಂ ಇಲ್ಲವೋ, ಯಾರು ನಿವೇಶನಕ್ಕಾಗಿ ಭೂಮಿಯನ್ನು ಕಳೆದುಕೊಳ್ಳುತ್ತಾರೋ ಅಂತವರಿಗೆ ಮಾತ್ರ ನಿವೇಶನಗಳನ್ನು ಹಂಚಬೇಕು. ಹರಿಜನರಿಗೆ ಮತ್ತು ಬಡವರಿಗೆ ಅನುಕೂಲ ಮಾಡಿಕೊಡಲು ಸರ್ಕಾರದವರು ಯಾವ ಕೆಲಸ ಮಾಡಬೇಕೆಂದು ಹೊರಟಿರೂ ಸಹ ಆ ಕೆಲಸಗಳು ಮಾಮೂಲಾಗಿ ತಡವಾಗುತ್ತದೆ. ಈ ರೀತಿ ತಡವಾಗುವ ಪದ್ಧತಿ ಅನುಚಾನವಾಗಿ ನಡೆದುಕೊಂಡು ಬಂದಿದೆ. ೩೧ ದಿವಸಗಳೊಳಗೆ ಹರಿಜನರಿಗೆ ಜಮೀನನ್ನು ಸ್ವಾಧೀನಪಡಿಸಿಕೊಂಡು ನಿವೇಶನಗಳನ್ನು ಒದಗಿಸಬೇಕೆಂದು ಈ ಕಾಯಿದೆಯಲ್ಲಿ ಇದ್ದರೂ ಸಹ, ಭೂಸ್ವಾಧೀನ ಮಾಡಿಕೊಳ್ಳುವ ಕೆಲಸ ನಾನಾ ಕಾರಣಗಳಿಂದ ತಡವಾಗಬಹುದು. ಏಕೆಂದರೆ ಭೂಮಿಯನ್ನು ಕಳೆದುಕೊಳ್ಳುವವರು ಕೋರ್ಟಿನಲ್ಲಿ ಕೇಸ್ ಹಾಕಬಹುದು ಈ ರೀತಿಯಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ಮುಖ್ಯವಾಗಿ ಈ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ವಹಿಸಬೇಕು. ಭಾರತ ಸರ್ಕಾರದವರು ಮತ್ತು ರಾಜ್ಯಸರ್ಕಾರದವರು ಬಡವರಿಗೆ ಸೈಟುಗಳನ್ನು ಹಂಚಬೇಕೆಂಬ ಏನು ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೋ, ಅದನ್ನು ಸಾಧಿಸಬೇಕಾದರೆ ಊರ ಸಮೀಪದಲ್ಲಿ ಎಲ್ಲೆಲ್ಲಿ ಖಾಲಿ ಜಮೀನುಗಳು ಇದೆಯೋ ಅದನೆಲ್ಲಾ ಒಂದು ನಿರ್ದಿಷ್ಟವಾದ ಅವಧಿಯೊಳಗೆ ಸ್ವಾಧೀನಪಡಿಸಿಕೊಂಡು

(ಶ್ರೀ ಕೆ. ಪ್ರಭಾಕರ)

ನಿವೇಶನ ಇಲ್ಲದವರಿಗೆ ಒದಗಿಸಿಕೊಡಬೇಕು. ಈ ರೀತಿ ನಿವೇಶನಗಳನ್ನು ಹಂಚಿದ ಮೇಲೆ ಆ ಜಾಗದಲ್ಲಿ ಲೇಔಟ್ ಕೆಲಸವನ್ನು ಜಾಗ್ರತೆ ಮಾಡಿಕೊಡುವಂತೆ ಆಯಾ ಪಂಚಾಯಿತಿಯವರಿಗೆ ತಿಳಿಸಬೇಕು ಅದು ಪಂಚಾಯಿತಿಯವರ ಜವಾಬ್ದಾರಿ ಎಂದು ಸರ್ಕಾರದವರು ತಿಳಿಸಬೇಕು. ಇಲ್ಲದಿದ್ದರೆ ಅವರು ನೆಗ್ಲೆಕ್ಟ್ ಮಾಡಬಹುದು. ಪಂಚಾಯಿತಿಯವರು ಲೇಔಟ್ ಮಾಡಿಕೊಡುವುದರ ಮೂಲಕ ಎಲ್ಲ ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಎಂಬ ಬಗ್ಗೆ ಒಂದು ಕ್ಲಾಸನ್ನು ಬೇಕಾದರೆ ಈ ಕಾನೂನಿನಲ್ಲಿ ಅಳವಡಿಸಬಹುದು. ಈ ಕೆಲಸವನ್ನು ಮಾಡುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಸಹಾಯವನ್ನು ಪಡೆದುಕೊಳ್ಳುವುದು ಒಳ್ಳೆಯದು. ಮುಖ್ಯವಾಗಿ ಈ ಇಲಾಖೆಯಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ಸ್ಪೆಷಲ್ ಆಫೀಸರ್ ಎಂದು ಏನು ಇದ್ದಾರೋ ಅವರಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಮಾಮೂಲಿನಂತೆ ಈ ಕೆಲಸವನ್ನು ರೆವಿನ್ಯೂ ಅಧಿಕಾರಿಗಳಿಗೇ ವಹಿಸಿದರೆ ರೆಡ್‌ಟೇಪಿಜಂ ಮುಂದುವರೆಯುತ್ತದೆಂದು ಹೇಳುತ್ತೇನೆ. ನಾನೇನು ಅಧಿಕಾರಿಗಳನ್ನು ತೆಗಳುತ್ತಿಲ್ಲ. ಮುಖ್ಯವಾಗಿ ಈ ಕೆಲಸ ಡಿಫೀಟ್ ಆಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಭಾರತ ಸರ್ಕಾರದವರ ಗುರಿ ಏನಿದೆ ಅದನ್ನು ಜಾರಿಗೆ ತರುವಂತಾಗಲು, ಈ ಒಂದು ಬಿಲ್ ಜಾಗ್ರತೆ ಕಾನೂನು ಆಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಇದರಲ್ಲಿ ಎರಡು ಮೂರು ನೀತಿಗಳು ಬಾರದ ಹಾಗೆ ನೋಡಿಕೊಳ್ಳಬೇಕು. ಮುಖ್ಯವಾಗಿ ಸರ್ಕಾರ ಹಾಗೂ ಸಂಬಂಧಪಟ್ಟ ಮಂತ್ರಿಗಳು ಬಹಳ ದಿವಸಗಳಿಂದ ಇದ್ದ ಕೊರತೆಯನ್ನು ತಪ್ಪಿಸಿದ್ದಾರೆ. ಈ ಒಂದು ಸಾಹಸ ಕಾರ್ಯ ಬೇಗ ನೆರವೇರಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ. (ಸಾಗರ).—ಮಾನ್ಯ ಅಧ್ಯಕ್ಷರೇ, ನಾನು ಲಾಯರ್ ಆಗಿ ಕೆಲಸ ನೂಡಿ ಅನುಭವವಿರುವುದರಿಂದ, ಇದರ ಬಗ್ಗೆ ಒಂದೆರಡು ಸಲಹೆಗಳನ್ನು ಮಾತ್ರ ಮಾಡುತ್ತೇನೆ. ಮನೆ ಇಲ್ಲದವರಿಗೆ ನಿವೇಶನ ಒದಗಿಸಲು ಆಗತ್ಯವಾದ ಜವೀನನ್ನು ೩೦ ದಿವಸಗಳೊಳಗೆ ಸರ್ಕಾರದವರು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಈ ಒಂದು ವಿಧೇಯಕವನ್ನು ತರಲಾಗಿದ್ದರೂ ಸಹ, ನನ್ನ ಒಂದು ಅನುಭವದಲ್ಲಿ ಹೇಳುವುದಾದರೆ, ೩೦ ದಿವಸಗಳಲ್ಲಿ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಏಕೆಂದರೆ ಜವೀನಾ ಕಳೆದುಕೊಳ್ಳುವವರು ೨೯ನೇ ದಿನ ಕೋರ್ಟಿಗೆ ಹೋಗಿ ಅಬ್ಜಕ್ಷನ್ ರೈಸ್ ಮಾಡುತ್ತಾರೆ. ನಂತರ ಕೋರ್ಟಿನವರು "case heard and posted for objection"—ಎಂದು ಕೇಸನ್ನು ಮುಂದಕ್ಕೆ ಹಾಕುತ್ತಾರೆ ಇದಕ್ಕೆ ಒಂದೆರಡು ತಿಂಗಳ ಕಾಲ ಹಿಡಿಯುತ್ತದೆ. After filing objection "case posted for argument" ಎಂದು ಮುಂದಕ್ಕೆ ಹಾಕುತ್ತಾರೆ ಇದೂ ಆದ ನಂತರ, after argument "posted for orders" ಎಂದು ಮತ್ತೆ ಸ್ವಲ್ಪಕಾಲ ತಳ್ಳುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಸೆಕ್ಷನ್ ೫ರಲ್ಲಿ ಒಂದು ನಿರ್ದಿಷ್ಟವಾದ ಅವಧಿಯನ್ನು ಸೇರಿಸಬೇಕು. ಇಲ್ಲದಿದ್ದರೆ ನಿವೇಶನದ ಮಾಲೀಕಲೀನಾದರೂ ಕೋರ್ಟಿಗೆ ಹೋದರೆ ಅದು ತೀರ್ಮಾನವಾಗಲು ಎರಡು ಮೂರು ವರ್ಷಗಳ ಕಾಲ ಬೇಕಾಗುತ್ತದೆ. ಆಗ ಸರ್ಕಾರದವರು ಏನು ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೋ ಅದನ್ನು ಸಾಧಿಸುವುದು ಕಷ್ಟವಾಗುತ್ತದೆಂದು ಹೇಳುತ್ತೇನೆ ಈ ಎಲ್ಲ ಕಾರಣಗಳಿಂದ within thirty days of the service of the notice ಎಂಬ ಹೇಳುವುದಕ್ಕೆ ಬದಲು ಒಂದು ನಿರ್ದಿಷ್ಟವಾದ ಅವಧಿಯನ್ನು ಇದರಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ.—ಸನ್ಮಾನ ಅಧ್ಯಕ್ಷರೇ, ಈ ಚರ್ಚೆಯಲ್ಲಿ ಭಾಗವಹಿಸಿದಂತಹ ಮಾನ್ಯ ಸದಸ್ಯರುಗಳಿಗೆ ನಾನು ಋಣಿಯಾಗಿದ್ದೇನೆ. ಮಾನ್ಯ ಸದಸ್ಯರುಗಳು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವ ರೀತಿಯಾಗಿ ಈ ಒಂದು ಯೋಜನೆಯನ್ನು ಕಾರ್ಯಗತ ಮಾಡಬೇಕು ಎಂಬುದರ ಬಗ್ಗೆ ಸರ್ಕಾರ ಕಾರ್ಯಕ್ರಮ ಕೈಕೊಳ್ಳುತ್ತದೆ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರು, ಶ್ರೀಮಾನ್ ಚೆನ್ನಪ್ಪನವರು ಕೆಲವು ನಿರ್ದಿಷ್ಟವಾದ ಅಂಶಗಳ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಖಾಲಿಸೈಟ್‌ಕೊಟ್ಟುಬಿಟ್ಟರೆ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬುದರ ಬಗ್ಗೆ ಸಲಹೆ ಕೊಟ್ಟಿದ್ದಾರೆ ನಾನಾದರೂ ಈ ಸಭೆಗೆ ಹೇಳುತ್ತೇನೆ. ಮನೆ ನಿವೇಶನ ಕೊಡುವುದು ಸರ್ಕಾರದ ಒಂದು ಮುಖ್ಯ ಉದ್ದೇಶವಾದರೂ ಸಹ ಮನೆ ಕಟ್ಟಿಕೊಡುವುದು ಮತ್ತು ಮನೆ ಕಟ್ಟಿಕೊಳ್ಳುವುದಕ್ಕೆ ಸಹಾಯ ಮಾಡುವುದು ಸಹ ಸರ್ಕಾರದ ಉದ್ದೇಶವಾಗಿದೆ ಸೈಟ್ ಕೊಟ್ಟು ನಂತರ ಮನೆಕಟ್ಟಿಕೊಳ್ಳುಬೇಕೆಂಬುದು ಎಲ್ಲರ ಅಭಿಲಾಷೆಯಾಗಿರುತ್ತದೆ. ಆದರಲ್ಲೂ ತಲೆಯ ಮೇಲೊಂದು ನೆರಳು ಇರಬೇಕೆಂಬುದು ಎಲ್ಲರ ಅಭಿಲಾಷೆಯಾಗಿದೆ ಬಹಳ ದಿವಸಗಳಿಂದ ನಿಗರ್ತಿಕರಾಗಿ, ಜೀವನ ಮಾಡುವುಕ್ಕೂ ಸಹ ಶಕ್ತಿ ಇಲ್ಲದೆ. ಬೇರೆಯವರ ಭೂಮಿಯ ಮೇಲೆ ಇದ್ದುಕೊಂಡು, ಯಾವ ಒಂದು ಸ್ವಾತಂತ್ರ್ಯವೂ ಇಲ್ಲದೆ ಇದ್ದವರಿಗೆ ಇನ್ನು ಮುಂದೆ ಗೌರವ ಜೀವನ ನಡೆಸುವಂತೆ ಮತ್ತು ನಾಗರಿಕ ಜೀವನ ನಡೆಸುವಂತೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಲು ಸರ್ಕಾರ ತೀವ್ರವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

ಹಾಗೆ ಹಾಕಿಕೊಂಡಿರುವ ಕಾರ್ಯಕ್ರಮದಂತೆ ಈಗ್ಗೆ ಎರಡುವರೆ ತಿಂಗಳಿಂದೀಚೆಗೆ ಸುಮಾರು ಎರಡು ಲಕ್ಷಕ್ಕೂ ಮೀರಿ ಸೈಟುಗಳನ್ನು ಹಂಚಿದ್ದೇವೆ. ಇದು ತಮಗೆಲ್ಲರಿಗೂ ಗೊತ್ತಿದೆ, ಪುನಃ ೧, ೨೫, ೦೦೦ ಸೈಟುಗಳನ್ನು ಮಾಡಿಸಿ ಈಗ ಹಂಚುತ್ತಿದ್ದೇವೆ. ನಮ್ಮಲ್ಲಿರುವ ಅಂಕಿ ಅಂಶಗಳ ಪ್ರಕಾರ ಸುಮಾರು ೩, ೭೫, ೦೦೦ ಸೈಟುಗಳು ಇವೆ. ಇದನ್ನು ಮನೆ ಇಲ್ಲದವರಿಗೆ ಹಂಚಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಆದಷ್ಟು ಬೇಗನೆ ಇದನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ನಿರ್ಗತಿಕರಾಗಿರುವವರು ಹಾಗೂ ಜೀವನದಲ್ಲಿ ಬಹಳ ಕಷ್ಟದಲ್ಲಿರುವ ಜನರು ಸುಮಾರು ೨೫ ಲಕ್ಷಕ್ಕೂ ಮೀರಿ ಇದ್ದಾರೆ. ಸುಮಾರು ಏಳೆಂಟು ಲಕ್ಷ ಜನರು ಮನೆ ಇಲ್ಲದವರು ಇರಬಹುದು, ಇವರೆಲ್ಲರಿಗೂ ಮನೆಗಳನ್ನು ಮಾಡಬೇಕಾದರೆ ಸುಮಾರು ಹತ್ತು ಲಕ್ಷಕ್ಕೂ ಮೇಲೆ ಬರಬಹುದು. ಇಂತಹವರಿಗೆಲ್ಲಾ ಮನೆಯ ನಿವೇಶನಗಳನ್ನು ಮಾಡಿ ಕೊಡಬೇಕೆಂದು ಸರಕಾರದ ಉದ್ದೇಶ. ಇದನ್ನೆಲ್ಲಾ ಒಂದೇ ದಿವಸದಲ್ಲಿ ಮಾಡಂವದಕ್ಕಾಗುವುದಿಲ್ಲ. ಹಂತ ಹಂತವಾಗಿ ಇದನ್ನು ಒದಗಿಸಿಕೊಡಬೇಕು ಎನ್ನುವುದೇ ಸರಕಾರದ ಉದ್ದೇಶ. ಯಾರು ಮೈಸೂರು ರಾಜ್ಯದಲ್ಲಿ ಇದ್ದಾರೆ, ಪಟ್ಟಣದಲ್ಲಾಗಲೀ ಹಳ್ಳಿಗಾಡಿನಲ್ಲಾಗಲೀ ಯಾರಿಗೆ ಮನೆ ನಿವೇಶನಗಳಿಲ್ಲ ಅಂತಹವರಿಗೆ ನಿವೇಶನಗಳನ್ನು ಕೊಡಬೇಕೆಂದು ಪ್ರಾರಂಭ ಮಾಡಿದ್ದೇನೆ. ಸರಕಾರದ ಜಮೀನುಗಳನ್ನು ಹಂಚುವ ವಿಚಾರದಲ್ಲಿ ಆಗಲೇ ಹೇಳಿದ್ದೇನೆ. ಸರಕಾರದ ಜಮೀನುಗಳಾದ ನಂತರ ಖಾಸಗೀ ಜಮೀನುಗಳನ್ನು ಆಕ್ವೈರು ಮಾಡಿಕೊಂಡು ಪ್ರತಿಯೊಬ್ಬರಿಗೂ ಸೈಟುಗಳನ್ನು ಹಂಚಬೇಕಾಗುತ್ತದೆ ಎನ್ನುವ ಒಂದು ಉದ್ದೇಶದಿಂದ ಈ ಬಿಲ್ಲನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಮತ್ತೆ, ಇದರಲ್ಲಿ ಕೆಲವು ಸಲಹೆಗಳನ್ನು ಸದಸ್ಯರು ಮಾಡಿದ್ದಾರೆ, ಅವುಗಳೆಲ್ಲಾ ಬಹಳ ಉತ್ತಮವಾದ ಸಲಹೆಗಳು. ಇದರಲ್ಲಿ ಒಂದು ಸಂಶಯವನ್ನು ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ವ್ಯಕ್ತ ಪಡಿಸಿದರು. ಅದು ಮಾಲೀಕರಿಗೆ ಮುಂವತ್ತು ದಿನಗಳ ಅವಕಾಶ ಕೊಟ್ಟಿರುವುದು ಸರಿಯಾಗಿಲ್ಲ, ಇದರ ಕೇಸುಗಳು ಪೂರ್ತಿಯಾಗಿ ಫೈನಲ್ ಆಗಬೇಕಾದರೆ ೩೦ ದಿನಗಳಲ್ಲಿ ಇನ್ನು ಹೆಚ್ಚು ಕಾಲ ಬೇಕಾಗುತ್ತದೆ ಎಂದರು. ನನಗನಿಸುವುದು ಆ ರೀತಿಯಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಉದ್ದೇಶಪೂರ್ವಕವಾಗಿ ಮಾಡಿದರೆ ನಿದಾನವಾಗಬಹುದು. ಅದರೆ ಇದರಲ್ಲಿರುವ ಅಧಿಕಾರಿಗಳು ಕೂಡ ಮನೆ ಕಟ್ಟಿಕೊಳ್ಳಬೇಕೆಂದು ಆಸೆಯುಳ್ಳವರಾಗಿರುವುದರಿಂದ ಇದಂ ಸಾವಕಾಶವಾಗಂವುದಿಲ್ಲ. ೩೦ ದಿನಗಳ ಅವಕಾಶ ಕೊಟ್ಟು, ಇದನ್ನು ನೋಟಿಫೈ ಮಾಡಬೇಕಾಗುತ್ತದೆ. ಈಗಿನ ಆಕ್ವೆಸಿಷನ್ ಆಕ್ಟ್ ಸೆಕ್ಷನ್ ನಾಲ್ಕರ ಪ್ರಕಾರ ಮೊದಲು ನೋಟಿಫಿಕೇಷನ್ ಕೊಡಬೇಕು, ಆನಂತರ ಕಲಂ ೫ ರ ಪ್ರಕಾರ ಆವಕಶ ಕೊಟ್ಟುಬಿಟ್ಟು ಅವನ ಹೇಳಿಕೆ ಪಡೆದು ಇದರ ವಾದ ಪ್ರತಿವಾದಗಳನ್ನು ಪಡೆದು ಇದರ ಹಕ್ಕು ಬಾಧ್ಯತೆ ಹೇಗೆ ಇದೆ ಇವೆಲ್ಲವನ್ನೂ ಸರಕಾರ ಪೈಸಲು ಮಾಡಬೇಕಾದರೆ ಇದಕ್ಕೆ ಫೈನಲ್ ನೋಟಿಫಿಕೇಶನ್ ಕೂಡಬೇಕಾಗಿ ಬರುತ್ತದೆ. ಕೆಲವು ಸಂದರ್ಭಗಳು ವಿಶೇಷವಾಗಿ ಬರಬಹುದು. ಮಾನ್ಯ ಸದಸ್ಯರಿಗೆ ಉದಾಹರಣೆಯಾಗಿ ಹೇಳಬೇಕಾದರೆ ಹತ್ತಾರು ವರ್ಷಗಳಾದರೂ ಕೆಲವು ಕೇಸುಗಳು ಇತ್ಯರ್ಥವಾಗಂವುವಿಲ್ಲ. ಮಂಡ್ಯ ಜಿಲ್ಲೆಯಲ್ಲಿ ನನಗೆ ತಿಳಿದಂತೆ ಇಪ್ಪತ್ತು ವರ್ಷಗಳಿಂದಲೂ ಒಂದು ಕೇಸು ಇತ್ಯರ್ಥವಾಗದೆ ನಿಂತಿದೆ ಇದು ಎರಡು ಮೂರು ಸಾರಿ ಹೈ ಕೋರ್ಟಿನವರೆಗೂ ಬಂದು ವಿಚಾರಣೆಗಳಾಗಿವೆ. ಆ ನಂತರ ಸೆರಕಾರದ ಮುಂದೆ ಬಂತು. ಸರಕಾರ ಕೂಡ ಇದರ ಸ್ವಳವನ್ನು ಆಜಮಾಯಿಷಿ ಡಾಡಿಕೊಂಡು ಬಂತು ಆದರೂ ಇದರ ಬಗ್ಗೆ ಸ ತ್ತನ್ನು ಸ್ವಾಧೀನಪಡಿಸಿಕೊಳ್ಳಲು ನಿಧಾನ ವಾಯಿತು. ಇದಕ್ಕೆ ಕಲವು ವಿಶೇಷ ಸಂದರ್ಭಗಳು ಬಂದು ಅಡಚಣೆಗಳು ಬಂದು. ಇವುಗಳೆಲ್ಲವನ್ನೂ ಸರಕಾರ ಕೂಲಂಕಷವಾಗಿ ಪರಿಶೀಲನೆ ಮಾಡಿ ಇಲ್ಲಿ ಇಂತಹ ಒಂದು ಬಿಲ್ಲನ್ನು ತರಲಾಗಿದೆ, ಈ ಬಿಲ್ಲಿನ ಉದ್ದೇಶವೂ ಕೂಡ ಸರಿಯಾಗಿದೆ. ಇದರಲ್ಲಿ ಇರುವ ಮುವ್ವತ್ತು ದಿನಗಳ ಅವಕಾಶ ಕೊಟ್ಟು ಮತ್ತೆ ಆಕ್ವಿಸಿಷನ್ ಆಕ್ಟ್ ಕಲಂ ೪ ರಂತೆ ನೋಟಿಫೈ ಮಾಡಲಾಗುತ್ತೆ ಮತ್ತು ಮುವ್ವತ್ತು ದಿನಗಳಲ್ಲಿ ಅದನ್ನು ಸ್ವಾಧೀನಕ್ಕೆ ತಗೆದು ಕೊಳ್ಳುತ್ತಾರೆ ಇದರಲ್ಲಿ ಅವರಿಗೆ ಕಾಂಪನ್‌ಸೇಷನ್ ಇಲ್ಲವೇ ಅವಾರ್ಡುಕೂಡುವುದಕ್ಕೂ, ಒದಕೂ ಸಂಬಂಧವಿಲ್ಲ ನೋಟಿಫಿಕೇಷನ್ನು (೪)ರ ಪ್ರಕಾರ ಕೊಟ್ಟು ಅದಾದ ಮೂವತ್ತು ದಿನಗಳೊಳಗೆ ಆಕ್ಟಿಷನೆ ಮಾಡಲು ಇದರೊಳಗೆ ಅರ್ಹತೆ ಉಂಟು. ಇನ್ನು ಇದರಲ್ಲಿರುವ ಸಬ್ ಕ್ಲಾಸು ೩ ರ ಸೆಕ್ಷನ್ ೫ ರಲ್ಲಿ ಈ ರೀತಿ ಹೇಳಲಾಗಿದೆ.

(5) On the publicaton in the Offical Gazette of the declartion under sub section (4) the land shall vest absolutely in the State Government free from all encumbraces.

ಇದರ ಕಲಂ (೪) ರಪ್ರಕಾರ ನಾವೇನು ನೋಟಿಫಿಕೇಷನ್ ಕೊಡುತ್ತೇವೆ ಇದರ ಪ್ರಕಾರ ಯಾವ ಹಕ್ಕೂ ಬರುವುದಿಲ್ಲ, ಬೇರೆಯವರಿಗೂ ಬರುವುದಿಲ್ಲ. ಕಲಂ (೩) ರ ಪ್ರಕಾರ ಸರಕಾರ ತೀರ್ಮಾನ ಮಾಡಿದ ನಂತರ ಅದೇ ನೋಟಿಫಿಕೇಷನ್ ಫೈನಲ್ ನೋಟಿಫಿಕೇಷನ್ ಆಗುತ್ತದೆ. ಇದಾದ ಮುವ್ವತ್ತು ದಿನದೊಳಗೆ ಜಮೀನನ್ನು ಸ್ವಾಧೀನಕ್ಕೆ ತಗೆದುಕೊಳ್ಳಬಹುಂ. ಇದುವರೆಗೆ ಇದ್ದ ಕಾನೂನಲ್ಲಿ ಇದಕ್ಕೆ ಅವಕಾಶವಿರಲಿಲ್ಲ. ಇದರಲ್ಲಿ ಸದಸ್ಯರು ಹೇಳುವ ಹಾಗೆ ಯಾವ ಸಂಶಯವೂ ಇಲ್ಲ, ಮುಂದೆ ಇದರ ಬಗೆ

ಎನಾದರೂ ನ್ಯೂನತೆಗಳು ಬರುವ ಹಾಗಿದ್ದರೆ ಅದನ್ನು ರೂಲ್ಸುಗಳಲ್ಲಿ ಸರಿಮಾಡಬಹುರು ಮತ್ತು ಆ ರೂಲ್ಸುಗಳನ್ನು ಇದರಲ್ಲಿರುವ ಕಲಂ ೮ ರಲ್ಲಿ ಹೇಳಿದೆ ಅದು ಹಿಗಿದೆ:

" 8 RULES: (1) The State Government may, by notification make rules for carrying out the purposes of this Act "

ಇದರಲ್ಲಿ ಹಣ ಕೊಡುವುದರ ಬಗ್ಗೆ ಕೆಲವು ಸದಸ್ಯರು ಹೇಳಿದರು.

ಕಾನ್ಸ್‌ಟಿಟ್ಯೂಷನ್‌ದ ೨೫ನೇ ಅಮೆಂಡುಮೆಂಟು ಆದನಂತರ ಸಮ್ಮ ಅಸೆಂಬ್ಲಿಯಲ್ಲಿ ಇಂತಹ ಮಸೂದೆಯನ್ನು ಇದೇ ಮೊದಲು ನಾವು ಇಲ್ಲಿ ತಂದಿರತ್ಕದು. ಇದುವರೆಗೂ ಇದ್ದ ಅಕ್ಟಿಸಿಷನ್ ಆಕ್ಟ್‌ನಲ್ಲಿ ಅಪ್ರಾಕಿಮೇಟ್ ವಾಲ್ಯು ತಿಳಿದುಕೊಳ್ಳವಾಗ ಮಾರ್ಕೆಟ್‌ವಾಲ್ಯು ಕೊಡುತ್ತಿದ್ದರು, ಅದರಲ್ಲಿ ನೋಷನಲ್‌ವಾಲ್ಯೂ ಕೂಡ ಸೇರಿಸುತ್ತಿದ್ದರು. ಮತ್ತು ಫ್ಯೂಚರ್ ವಾಲ್ಯುವನ್ನು ಸೇರಿಸುತ್ತಿದ್ದರು. ಇಂತಹ ನಿದರ್ಶನಗಳಂ ಬೇಕಾದಷ್ಟು ಇವೆ. ೨೫ನೇ ಕಾನ್‌ಟಿಟ್ಯೂಷನ್ ಅಮಂಡೇಮೆಂಟು ಆದನಂತರ ಪ್ರಥಮವಾಗಿ ಕಾಂಪೆನ್‌ಸೆಷನು ತಗೆದು ಹಾಕಿ ಅದರಲ್ಲಿ "ಅಮೌಂಟು" ಎಂದು ಸೇರಿಸಲಾಗಿದೆ. " ಅಮೌಂಟು " ಎಂದರೆ ಏನು ಎನ್ನುವುದನ್ನು ನಾವು ಮೂಡುವ ನಿಯದೂವಳಿಗಳಲ್ಲಿ ಸ್ಪಿರಪಡಿಸಬಹುದು. ಆ ಉದ್ದೇಶದಿಂದ ಇದನ್ನು ಹೇಳಲಾಗಿದೆ ಇದನ್ನು ಕೂಡ ಮಲ್ಟಿಪಲ್ಸ್ ಆಫ್ ಲ್ಯಾಂಡಂ ರೆವೆನ್ಯೂ ತರಹ ವಸೂಲ ಮಾಡಬೇಕೆಂದೂ ಒಂದು ಸಲಹೆ ಇದೆ.

ಎರಡನೇದು ಭೂಮಿಯಲ್ಲಿ ಉತ್ಪಾದನೆ ಮಾಡತಕ್ಕ ಒಟ್ಟು ಬೆಳೆ ಏನಿದೆ ಅದರ ಒಂದೆರಷ್ಟೋ, ಇಲ್ಲವೇ ಕಾಲ್ಭಾಗವೋ ಹದಿನೈದರಷ್ಟು ಎನ್ನುವುದಕ್ಕೆ ಇದರ ಮಲ್ಟಿಪಲ್ಸ್ ಆಫ್ ಗ್ರಾಸ್ ಪ್ರೊಡ್ಯೂಸ್ ಮೇಲೆ ನಿರ್ಧಾರ ಮಾಡಬೇಕು ಎನ್ನುವ ಬಗ್ಗೆ ಇದರ ಕ್ರೈಟೀರಿಯಾ ಯಾವರೀತಿ ಇರಬೇಕೆನ್ನುವ ಸೂಚನೆ ಬಂದಿದೆ. ಇವು ಗಳನ್ನೆಲ್ಲಾ ನಿಯಾಮಾವಳಿಗಳಲ್ಲಿ ಸರಕಾರ ಸರಿ ಮಾಡಬೇಕೆಂದು ಇದೆ.

ಶ್ರೀಮಾನ್ ದೇವೇಗೌಡರು ಒಂದು ವಿಚಾರ ಇಲ್ಲಿ ತಂದಿದ್ದಾರೆ. ಇದರಲ್ಲಿ ಫ್ರೀ ಫ್ರಂ ಎನ್‌ಕಂಬ್ರನ್ಸ್‌ಸ್ ಎನ್ನುವುದಕ್ಕೆ ಇದನ್ನು ಯಾರು ಆಥರೈಸು ಮಾಡುತ್ತಾರೆ ಮತ್ತು ಎಷ್ಟು ಹಣ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದಾರೆ ಎಂದು ಕೇಳಿದರು. ಇನಾಂಸ್ ಅಬಾಲಿಷನ್ ಆಕ್ಟ್ ಏನಿದೆ ಅದರ ಕಲಂಗಳಂತೆ ಯಾರಾದರೂ ಭೂಮಿಯನ್ನು ಬೇರೆಯವರು ಮಾಡಿಕೊಡಿದಾರೆ, ಗೇಣಿದಾರರು ಮಾಡಿಕೊಂಡಿದ್ದಾರೆ ಅಂತಹವರಿಂದ ನಾವು ಏನೂ ತಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಕಾಂಪನ್ಸೇಷನ್ ಎಂದು ಯಾವಾಗ ಕೊಡುತ್ತೇವೋ ಅದು ಆಗ ಸರಕಾರಕ್ಕೆ ಸೇರುತ್ತದೆ ಇದರಲ್ಲಿ ಎನ್‌ಕಂಬ್ರೆನ್ ಎಂದು ಇಷ್ಟೇ ಹಾಕುವುದು ಕಷ್ಟವಾಗುತ್ತದೆ. ಸರ್ವೇ ಸಾಮಾನ್ಯವಾಗಿ ದೇಶದಲ್ಲಿ ಇಂತಹ ಸಮಸ್ಯಗಳನು ನಿವಾರಣೆ ಮಾಡುವಾಗ ಇಂತಹ ಕಷ್ಟ ಕೆಲವರಿಗೆ ಆಗುತ್ತದೆ.

ಒಳ್ಳೆಯ ಕೆಲಸ ಸಾಧನೆ ಮಾಡುವಾಗ ಕೆಲವರಿಗೆ ತೊಂದರೆಯಾಗುತ್ತದೆ. ಅದನ್ನು ಸಹಿಸಿಕೊಳ್ಳಬೇಕಾಗುತ್ತದೆ. ಕಾನೂನಿನಲ್ಲಿ ನನಗೆ ತಿಳಿದ ಹಾಗೆ ಪರಿಹಾರ ಕೊಡತಕ್ಕುದು ಯಾವುದೂ ಇಲ್ಲ. ಆದುದರಿಂದ ಫ್ರೀ ಫ್ರಂ ಎನ್‌ಕಂಬರೆನ್ಸ್‌ಸ್ ಅವರಿಗೆ ಏನು ಹಣ ಕೊಡುತ್ತೇವೆ ಆ ಹಣವನ್ನು ಕೊಟ್ಟ ತಕ್ಷಣ ಅದು ಸರ್ಕಾರದಲ್ಲಿ ವೇಸ್ಟ್ ಆಗುತ್ತದೆ. ಅವರು ಎನು ಲೇವಾದೇವಿ ಮಾಡಿರುತ್ತಾರೆ ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ ಇದು ಸಮೀಕ್ಷಾಸಾಮಾನ್ಯವಾಗಿ ಇರತಕ್ಕ ವಿಷಯ.

ಶ್ರೀ ಬಿ. ಪುಟ್ಟಸ್ವಾಮಯ್ಯ : ನನಗೆ ಒಂದೇ ಒಂದು ಎಕರೆ ಜಮೀನು ಇದೆ. ಸರ್ಕಾರದವರು ಏನು ಹಣವನ್ನು ಆ ಜಮೀನಿಗಾಗಿ ಕೊಡುತ್ತಾರೆ, ಅದಕ್ಕಿಂತ ನಾನು ಜಾಸ್ತಿ ಸಾಲವನ್ನು ಮಾಡಿಕೊಂಡಿರ ಬಹುದು. ಅಂಥ ಸಂದರ್ಭದಲ್ಲಿ ಏನು ಮಾಡುತ್ತೀರಿ ?

ಎಚ್. ಡಿ. ದೇವೇಗೌಡ :— ಸಬ್ ಸೆಕ್ಷನ್ 7ರ ಬಗ್ಗೆ ನನಗೆ ಒಂದು ವಿವರಣೆ ಬೇಕಾಗಿದೆ. ಸರ್ಕಾರದಿಂದ ಅಧಿಕಾರ ಪಡೆದಿರುವಂಥ ಒಬ್ಬ ಅಧಿಕಾರಿ ಜಮೀನನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವಾಗ "ಯೂಸ್ ಸಚ್ ಫೋರ್ಸ್" ಎಂದು ಹೇಳಿರುವುದರ ಹಿನ್ನೆಲೆಯಾದರೂ ಏನು ? ಜಮೀನಿನ ಒಡೆಯನನ್ನು ಜೈಲಿಗೆ ಹಾಕುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ—ಕಾಂಪನ್‌ಸೇಷನ್, ಅವಾರ್ಡ್ ಎನ್ನುವ ಪ್ರೊಸೀಜರ್ ಏನಿತ್ತು ಅದರ ಬಗ್ಗೆ ಆಂತಿಮವಾಗಿ ತೀರ್ಮಾನವಾಗಲು ಹಲವಾರು ವರ್ಷಗಳಾಗುತ್ತಿತ್ತು. ಆದನ್ನೆಲ್ಲ ತಪ್ಪಿಸಬೇಕು ಎನ್ನುವ ಕಾರಣಕ್ಕಾಗಿ ನೋಟೀಸ್ ಕೊಟ್ಟ 30 ದಿವಸಗಳೊಳಗಾಗಿ ಸ್ವಾಧೀನಕ್ಕೆ ಕೊಡಬೇಕು. ಹಾಗೆ ಕೊಡದೆ ಇರುವಾಗ ಬಲಾತ್ಕಾರವಾಗಿ ತೆಗೆದುಕೊಳ್ಳಬೇಕಾಗುವುದರಿಂದ, ಏನಾದರೂ ಅಡಚಣೆ ಮಾಡಿದರೆ ಕಷ್ಟವಿರುತ್ತದೆ. ಆದಕ್ಕಾಗಿ ಈ ಸಬ್ ಕ್ಲಾಜ್ ಹಾಕಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ : ಯಾವ ಜಮೀನನ್ನು ಸರ್ಕಾರದವರು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದಿರುತ್ತಾರೆಯೋ ಆ ಜಮೀನಿನ ಮೇಲೆ ಭೂ ಅಭಿವೃದ್ಧಿ ಬ್ಯಾಂಕಿನಿಂದ ಅಥವ ಸರ್ಕಾರದಿಂದ ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಂಡಿರುವಂಥ ಸಂದರ್ಭಗಳಿರುತ್ತವೆ. ಆ ಜಮೀನಿಗೆ ಸರ್ಕಾರದವರು 200 ರೂಪಾಯಿ ಬೆಲೆ ಕೊಟ್ಟರೆ ಬಾಕಿ ಉಳಿಯುವ ಹಣವನ್ನು ಯಾವ ರೀತಿಯಾಗಿ ಪಡೆಯಲಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ .— ಆ ರೀತಿಯಾಗಿ ಎನ್‌ಕಂಬ್ರೆನ್ಸ್ ಇರುವಂಥ ಜಮೀನನ್ನು ಬಿಟ್ಟು ಬೇರೆ ಜಮೀನನ್ನು ತೆಗೆದುಕೊಳ್ಳಬಹುದು. ಅದೇ ಜಮೀನು ಏಕೆ ತೆಗೆದುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.— ಕಾನೂನು ಪ್ರಕಾರ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ .— ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದೆ. ಊರಿನ ಪಕ್ಕದಲ್ಲಿ ಒಂದು ಎಕರೆ ಅಥವಾ ಎರಡು ಎಕರೆ ಮಾತ್ರ ಜಮೀನು ಇರುತ್ತದೆ. ಆ ಭೂಮಿಯನ್ನು ಪೂರ್ತಿಯಾಗಿ ಆಕ್ಟ್ಯೂರ್ ಮಾಡಿಕೊಂಡ ಮೇಲೆ ಅವನಿಗೆ ಏನೂ ಜಮೀನು ಉಳಿಯದೆ ಹೋದರೆ ಅವನ ಗತಿ ಏನಾಗಬೇಕು ? ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ನಲ್ಲಿ ಬದಲಾವಣೆ ಮಾಡಿ, ಪೂರ್ತಿ ಭೂಮಿಯನ್ನು ಯಾರು ಕಳೆದುಕೊಳ್ಳುತ್ತಾರೆಯೊ ಅಂಥವರಿಗೆ ಬೇರೆ ಕಡೆ ಭೂಮಿ ಕೊಡುವಾಗ ಪ್ರಾಶಸ್ತ್ಯವನ್ನು ಕೊಡಬೇಕು ಎನ್ನುವ ಒಂದು ಎಕ್ಸ್‌ಕ್ಯೂಟಿವ್ ಆರ್ಡರಿನಲ್ಲಿ ಆದೇಶ ಕೂಡಬೇಕು. ಇಲ್ಲದೆ ಇದ್ದರೆ ಜಮೀನು ಕಳೆದುಕೊಂಡವನ ಮುಂದಿನ ಭವಿಷ್ಯವೇನು ? ಅದಕ್ಕಾಗಿ ಅವನಿಗೆ ಆದ್ಯತೆ ಕೊಡುವಂತೆ ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್ .— ಜಮೀನು ಕಳೆದುಕೊಳ್ಳುವ ವಿಚಾರ ಜನರಲ್ ಪ್ರಿಪೋಸಿಷನ್ ಆಯಿತು. ಜಮೀನು ಮುಳುಗಡೆಯಾಗುತ್ತದೆ, ಬೇರೆ ಬೇರೆ ಉದ್ದೇಶಗಳಿಗೆ ಜಮೀನು ತೆಗೆದುಕೊಳ್ಳುವಾಗ ಕಾಂಪನ್‌ಸೇಷನ್ ಕೊಡಲಾಗುತ್ತದೆ. ಜಮೀನು ಪೂರ್ತಿಯಾಗಿ ಕಳೆದುಕೊಂಡವರಿಗೆ ಆದ್ಯತೆಯನ್ನು ಕೊಡಬೇಕು ಎಂದು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ನಲ್ಲಿ ಕ್ಲಾರಿಫೈ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.— ನಾನು ರೀಹ್ಯಾಬಿಲಿಟೇಷನ್ ಕಮಿಟಿಯಲ್ಲಿ ಕೆಲಸ ಮಾಡಿದ್ದೇನೆ. ಆ ಅನುಭವದಿಂದ ನಾನು ಹೇಳುತ್ತಿದ್ದೇನೆ. ಎಕ್ಸ್‌ಪ್ರೊಪ್ರಿಯೇಟೆಡ್ ರೈತರಿಗೆ ಜಮೀನು ಕೊಡುವ ವಿಚಾರದಲ್ಲಿ ಸರ್ಕಾರ ಒಂದು ಹುಕುಂ ಹೊರಡಿಸಿ ಆಂಥ ರೈತರಿಗೆ ಸ್ವಲ್ಪ ಜಮೀನು ಮೀಸಲಾಗಿಡುವುದಲ್ಲದೆ ಅವರ ಆರ್ಜಿಗಳಿಗೆ ಭೂಮಿಯನ್ನು ಮಂಜೂರು ಮಾಡುವಾಗ ಆದ್ಯತೆಯನ್ನು ಕೊಡಬೇಕೆಂದು ಸಹ ತಿಳಿಸಬೇಕು. ಇದಕ್ಕೆ ಒಂದು ಎಕ್ಸಿಕ್ಯೂಟಿವ್ ಆರ್ಡರ್ ಹೊರಡಿಸಿ ಕ್ಲಿಯರ್ ಕಟ್ ಡೈರೆಕ್ಷನ್ ಕೊಡಬೇಕು ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್ :— ಆ ರೀತಿ ನಾವು ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ :— ಸಬ್ ಕ್ಲಾಜ್ 5 ರಲ್ಲಿ ಗೆಜೆಟ್ಟ್ ನಲ್ಲಿ ಪಬ್ಲಿಕೇಷನ್ ಆದ ಮೇಲೆ ಜಮೀನು ಸರ್ಕಾರದಲ್ಲಿ ವೆಸ್ಟ್ ಆಗುತ್ತದೆ ಎಂದು ಹೇಳಿದ್ದಾರೆ. ಸಬ್ ಕ್ಲಾಜ್ 7 ರಲ್ಲಿ ಒಂದು ವೇಳೆ ಜಮೀನನ್ನು ಸರ್ಕಾರದ ವಶಕ್ಕೆ ಕೊಡದೇ ಹೋದರೆ ಸರ್ಕಾರದ ಪರವಾದ ಅಧಿಕಾರಿಗಳು ಯಾವ ತರಹ ಬೇಕಾದರೂ ಕ್ರಮ ತೆಗೆದುಕೊಳ್ಳಬಹುದು ಎಂದು ಇದೆ. ಯಾರೋ ಒಂದೆರಡು ಎಕರೆ ಜಮೀನು ಊರಿನ ಹತ್ತಿರ ಹೊಂದಿರುತಾರೆ. ಅದಕ್ಕೆ ಎರಡು ಮೂರು ಸಾವಿರ ರೂಪಾಯಿ ಬೆಲೆಯಾಗುತ್ತದೆ. ಈಗ ಕಾಂಪೆನ್‌ಸೇಷನ್ ಎಂದು ಕೊಡುವುದಿಲ್ಲ. ಭೂಕಂದಾಯದ 20 ರಷ್ಟು ಅಥವಾ ಯಾವುದೋ ಒಂದು ಪ್ರಮಾಣದಲ್ಲಿ ಸ್ವಲ್ಪ ಹಣವನ್ನು ಕೊಡುತ್ತೀರಿ. ಆ ಜಮೀನಿನ ಮೇಲೆ ಅವನು ಸಾಲ ಮಾಡಿರುತ್ತಾನೆ. ಫ್ರೀ ಪ್ರಂ ಎನ್‌ಕಂಬರೆನ್ಸಸ್ ಎಂದರೆ ಯಾವ ರೀತಿಯಾಗಿ ಮಾಡುತ್ತೀರಿ.

6-00 P.M.

SRI D. DEVARAJ URS.— By changing the rules or amending the Land Grant Rules we can accommodate such small holders. Free from encumbrance does not mean that we cannot pay. The land may be encumbered to the Land Mortgage Bank and as we know sometimes in collusion with officers a higher valuation of the land is made. Such cases will be rare.

ಶ್ರೀ ಬಿ. ಬಸವಲಿಂಗಪ್ಪ.— ಶ್ರೀಮಾನ್ ಕೃಷ್ಣನ್‌ರವರು ಒಂದು ಪ್ರಶ್ನೆ ಎತ್ತಿದ್ದಾರೆ. ಸುಪ್ರೀಂ ಕೋರ್ಟ್‌ನವರು ಕಾಂಪನ್ಸೇಷನ್ ಬಗ್ಗೆ ಏನು ಒಂದು ನಿರ್ಣಯ ಕೊಟ್ಟಿದ್ದಾರೋ ಆ ನಿರ್ಣಯವನ್ನು ಪಬ್ಲಿಷ್ ಕೂಡ ಮಾಡಿದ್ದಾರೆ. ಅವರು ಅದನ್ನು ಟೈಪ್ ಮಾಡಿ ಕೊಟ್ಟಿದ್ದಾರೆ. ಅದನ್ನು ಓದಿದ ಮೇಲೆ ನನಗೆ ಅನಿಸಿತು ಅದು ಹಳೆ ಆಕ್ಟ್‌ನ ಮೇಲೆ ಇರತಕ್ಕಂಥ ತೀರ್ಪು ಕೊಟ್ಟಿದ್ದಾರೆ ಎಂದು. ಅನಂತರ ಶಿಫರ ಅಮೆಂಡ್‌ಮೆಂಟ್ ಆದ ಮೇಲೆ ಏನು ತೀರ್ಪು ಇದೆಯೋ ಅದನ್ನು ಕೊಟ್ಟಿಲ್ಲ ಆದುದರಿಂದ ಅವರು ಕೇಳತಕ್ಕಂಥ ಶಂಕೆ ಏನು ಇದೆ ಅದಕ್ಕೆ ಆಧಾರ ಇಲ್ಲ ಎಂದು ಹೇಳುತ್ತೇನೆ. ಇಷ್ಟು ಹೇಳಿ ಈ ಮಾನ್ಯ ಸಭೆ ಈ ಮಸೂದೆಯನ್ನು ಒಪ್ಪಬೇಕು ಎಂದು ಕೇಳಿಕೊಳ್ಳುತ್ತೇನೆ.

MADAM SPEAKER.— The question is :

" That the Mysore Acquisition of Lands (for Grant of House Sites) Bill, 1972 be taken into consideration.

The motion was adopted.

CLAUSES 2 to 3

MADAM SPEAKER.— The hon. Member Sri Shamanna has given notice of some amendments to clauses 2 and 3 but since he is not here I will put the clauses to vote.

The question is :

" That Clauses 2 and 3 do stand part of the Bill "

The motion was adopted

Clauses 2 and 3 were added to the Bill.

SRI B. BASAVALINGAPPA : Madam, I beg to move :

" That clauses 5, 10, 8, with inclusive, be re-numbered as Clauses 4, 10, 7 respectively."

MADAM SPEAKER : The question is :

" That clauses 5, to 8 with inclusive be re-numbered as clauses 4 to 7 respectively."

The amendment was adopted.

MADAM SPEAKER : The question is :

" That clauses 4 to 7, both inclusive, do stand part of the Bill."

The motion was adopted.

Clauses 4 to 7 both inclusive were added to the Bill.

CLAUSE 1 Etc.,

MADAM SPEAKER : The question is :

" That clause 1, the long Title, the Preamble and the Enacting Formula do stand part of the Bill."

The motion was adopted.

Clauses 1, the long Title, the Preamble and the Enacting Formula were added to the Bill.

MOTION TO PASS

SRI B. BASAVALINGAPPA : Madam, I beg to move :—

"That the Mysore Acquisition of Land (For Grant of House Sites) Bill, 1972, as amended, be passed."

The motion was adopted and the Bill was passed as amended.

MADAM SPEAKER : The House will now adjourn and meet tomorrow at one of the Clark.

The House adjourned at 10 Minutes Past Six of the Clock to meet again at One of the Clock on Thursday, the 14th December 1972.

ANNEXURE

THE MYSORE CONTINGENCY FUND (AMENDMENT) BILL, 1972.

(L. A. BILL No. 33 OF 72)

A Bill further to amend the Mysore Contingency Fand Act 1957.

Whereas it is expedient further to amend the Mysore Contingency Fund Act, 1957 (Mysore Act 11 of 1957) ;

Be it enacted by the Mysore State Legislature in the Twenty-third Year of the Republic of India as follows :—

1. *Short title and commencement* —(1) This Act may be called the Mysore Contigency Fund (Amendment) Act, 1972.

(2) It shall be deemed to have come into force on the Eleveth day of October, 1972.

2. *Amendment of section 2* —In section 2 of the Mysore Contingency Fund Act, 1957 (Mysore Act 11 of 1957) (hereinafter referred to as the principal Act), for the words "four crores of rupees", the words "ten crores of rupees" shall be substituted.

3. *Repeal of Mysore Ordinance No. 2 of 1972.*— The Mysore Contingency Fund (Temporary) (Amendment) Ordinance 1972 (Mysore Ordinance No. 2 of 1972) is here by repealed :

Provided that anything done or any action taken under the principal Act as amended by the said Ordinance shall be deemed to have been done or taken uader the principal Act as amended by this Act.